ಅಕ್ಕೆರಸು ಸಿರಿ

ಎ.ವಿ.ನಾವಡ



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು

ಮಕ್ಕಳಿಗಾಗಿ ತುಳುಕತೆಗಳು

ಕನ್ನಡ : 'ಮಕ್ಕಳಿಗಾಗಿ ಕತೆಗಳು' ಮಾಲಿಕೆಯಲ್ಲಿ
ಅಕ್ಕೆರಸು ಸಿರಿ - ಲೇಖಕರು : ಪ್ರೊ. ಎ. ವಿ. ನಾವಡ
ವಿಶ್ರಾಂತ ಪ್ರಾಧ್ಯಪಕ, 39, ಸಣ್ಣಕ್ಕಿ ವೀರಭದ್ರ ಗುಡಿ ರಸ್ತೆ, ನೆಹರೂ ಕಾಲೊನಿ, ಹೊಸಪೇಟೆ - 583276.
ಪ್ರಕಾಶಕರು - ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು

BVP-1681
10/10/17
G-2328
68/84.

ಮುದ್ರಣ	:	2007
ಬೆಲೆ	:	ರೂ. 25
ಪುಟಗಳು	:	28
ಪ್ರಧಾನ ಸಂಪಾದಕ	:	ಯಮ್. ಕೆ. ಸೀತಾರಾಮ್ ಕುಲಾಲ್ ಅಧ್ಯಕ್ಷರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಪ್ರಕಾಶಕರು	:	ಎಸ್. ಎಚ್. ಶಿವರುದ್ರಪ್ಪ ರಿಜಿಸ್ಟ್ರಾರ್ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 3. ದೂರವಾಣಿ / ಫ್ಯಾಕ್ಸ್ : 0824- 2459389 Email: tuluacademy@yahoo.co.in
ಹಕ್ಕುಗಳು	:	ಅಕಾಡೆಮಿ
ಮುದ್ರಣ	:	ಅರುಣಾ ಪ್ರಿಂಟರ್ಸ್ ಅಳಕೆ, ಮಂಗಳೂರು - 575 003. Ph : 0824-2494925.

ಮಕ್ಕಳಿಗಾಗಿ ಕತೆ

ಅಕ್ಕೆರಸು ಸಿರಿ

ಪ್ರೊ. ಎ. ವಿ. ನಾವಡ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 575003.
ದೂರವಾಣಿ / ಫ್ಯಾಕ್ಸ್ : 0824- 2459389.
Email: tuluacademy@yahoo.co.in

ಅಧ್ಯಕ್ಷರ ಮೊದಲ ಮಾತು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಈ ಹಿಂದೆ ಅಚ್ಚು ಹಾಕಿಸಿದ, ಪ್ರಚಾರದಲ್ಲಿರುವ ಕೆಲವೊಂದು ಮಕ್ಕಳ ಕತೆಗಳನ್ನು ಈ ಬಾರಿ ಕನ್ನಡ ಭಾಷೆಗೆ ಅನುವಾದಿಸಿದೆ. ನಮ್ಮ ಹಿರಿಯರು ಮಕ್ಕಳಿಗೆ ಹೇಳುತ್ತಿದ್ದ, ವಾಡಿಕೆಯಲ್ಲಿ ಅಜ್ಜಿ ಕತೆಗಳು ಎಂದು ಕರೆಯಲ್ಪಡುವ ಸಣ್ಣ ಸಣ್ಣ ಕತೆಗಳು ಈಗ ತುಳು ಭಾಷೆಯಲ್ಲಿದ್ದು, ಅದನ್ನು ಕನ್ನಡಕ್ಕೆ ಅನುವಾದ ಮಾಡಲಾಗಿದೆ. ತುಳು ಭಾಷೆಯು ಮೌಖಿಕ ಸಾಹಿತ್ಯದಲ್ಲಿ ಸಾಕಷ್ಟು ಪ್ರಚಾರಗೊಂಡಿದ್ದು, ಹಾಗೂ 1998ನೇ ಇಸವಿಯಲ್ಲಿ ತುಳು ಭಾಷೆಯಲ್ಲಿ ಅಕಾಡೆಮಿಯು ಅಚ್ಚುಪಡಿಸಿದ ಪುಸ್ತಕಗಳಲ್ಲಿ ಆರನ್ನು ಆಯ್ದು ಕನ್ನಡಕ್ಕೆ ಭಾಷಾಂತರಿಸಲಾಗಿದೆ. ತುಳುವಿನ 'ಅಕ್ಕೆರಸು ಸಿರಿ' ಕತೆ ಕನ್ನಡದಲ್ಲಿ ಅದೇ ಹೆಸರಿನಿಂದ ಅಚ್ಚಾಗಿ ಮಕ್ಕಳ ಕೈ ಸೇರುತ್ತಿದೆ.

ತುಳು ಭಾಷೆಯ ಮಕ್ಕಳ ಸಾಹಿತ್ಯ ಕನ್ನಡ ಭಾಷೆಯಲ್ಲೇ ವಿರಳವಾಗಿರುವಾಗ, ತುಳುವಿನಲ್ಲಿ ದೊರೆಯುವುದು ಅಸಾಧ್ಯ. ಈ ಕಾರಣದಿಂದ ಆಯ್ದ ಆರು ಪುಸ್ತಕಗಳು ಮಕ್ಕಳ ಅನುಕೂಲಕ್ಕಾಗಿ ತುಳುವಿನ ಬಗ್ಗೆ ಅಭಿಮಾನ, ಗೌರವ ಮೂಡಿಸಲಿಕ್ಕಾಗಿ ಕನ್ನಡಕ್ಕೆ ಅನುವಾದಿಸಿ ಹೊರತರಲಾಗಿದೆ.

ಈ ಆರು ಕತೆಗಳು ಒಂದೊಂದು ರೀತಿಯ ಜನಪದ ಕತೆಗಳಾದರೂ, ಮಕ್ಕಳಿಗೆ ನೀತಿ ಪಾಠದ ಅರಿವನ್ನು ಮೂಡಿಸುತ್ತದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ದಿ. ಅ. ಬಾಲಕೃಷ್ಣ ಶೆಟ್ಟಿ ಪೊಳಲಿಯವರ ಅವಧಿಯಲ್ಲೇ ಲೇಖಕರಿಂದಲೇ ಭಾಷಾಂತರ (ಅನುವಾದ)ಗೊಂಡು ಹಸ್ತಪ್ರತಿಗಳಾಗಿ ಉಳಿದುಕೊಂಡ, ಈ ಕೃತಿಗಳು ಈ ಅವಧಿಯಲ್ಲಿ ಅಚ್ಚಾಗುತ್ತಿರುವುದು ನಿಜವಾಗಿಯೂ ಅಕಾಡೆಮಿಗೆ ಹೆಮ್ಮೆಯ ವಿಷಯವಾಗಿದೆ.

ಈ ಕೃತಿಯನ್ನು ತುಳುವಿನಲ್ಲಿ ಬರೆದು, ಈಗ ಮತ್ತೆ ಪುನಃ ಕನ್ನಡಕ್ಕೆ ಅನುವಾದಗೊಳಿಸಿದ ಪ್ರೊ. ಎ. ವಿ. ನಾವಡ ಇವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು. ಈ ಪುಸ್ತಕವನ್ನು ಚೆಲುವಾದ ಮುಖ ಪುಟದೊಂದಿಗೆ ಅಚ್ಚು ಮಾಡಿದ ಅರುಣ ಪ್ರಿಂಟರ್ಸ್ ಮಾಲೀಕರಾದ ಶ್ರೀ ಎಚ್. ಪ್ರಸನ್ನಕುಮಾರ್ ಇವರಿಗೆ ಕೂಡ ಕೃತಜ್ಞತೆಗಳು.

ಮಂಗಳೂರು
18-7-2007

ಯಮ್. ಕೆ. ಸೀತಾರಾಮ್ ಕುಲಾಲ್
ಅಧ್ಯಕ್ಷರು
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಅಕ್ಕೆರಸು ಸಿರಿ

ಸೊಗಸು ಸಿಂಗಾರದ ನಾಡು ತುಳುನಾಡು. ಸತ್ಯನಾಪುರದ ಅರಮನೆಯಲ್ಲಿ ಆರಿಯ ಬನ್ನಾರ್ ಕುಲದ ಬಿರ್ಮು ಅಳ್ವರು ಅರಸು ಆಗಿದ್ದರು. ಅವರ ಹೆಂಡತಿ ಸೋಮಕ್ಕ ದೇವಿ. ಇಬ್ಬರೂ ಒಂದಾಗಿ ಹಾಲು ನೀರಿನಂತೆ ಇದ್ದರು. ಹೀಗೆ ಸುಖವಾಗಿ ಇದ್ದಾಗ ಸೋಮಕ್ಕ ಬಸುರಿಯಾದಳು. ಅರಮನೆಯಲ್ಲಿ ಎಲ್ಲಿಲ್ಲದ ಸಂತಸ, ಸಂಭ್ರಮ. ಸೋಮಕ್ಕಗೆ ತಿಂಗಳು ತುಂಬುತ್ತಾ ಬಂದಿತು. ಹೆರಿಗೆಯ ಬೇನೆ ಕಾಣಿಸಿಕೊಂಡಿತು. ಒಂದು ದಿನ ಬಂಗಾರದ ಗೊಂಬೆಯಂತಹ ಗಂಡು ಮಗುವಿಗೆ ಜನನ ಆಯಿತು. ಆದರೆ ಹುಟ್ಟಿದ ಮಗುವಿಗೆ ಆಯಸ್ಸು ಇಲ್ಲದೆ ಹೋಯಿತು. ಮಗು ನೆಲಕ್ಕೆ ಬಿದ್ದುದೇ ತಡ ಕಣ್ಣುಮುಚ್ಚಿಕೊಂಡಿತು. ತಾಯಿ ಸೋಮಕ್ಕಗೂ ಆಯುಸ್ಸು ತೀರಿತು. ಜೀವಬಿಟ್ಟು ಕೈಲಾಸಕ್ಕೆ ಸೇರಿದಳು. ಬಿರ್ಮು ಅಳ್ವರಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಕಣ್ಣಿಂದ ಕಣ್ಣೀರು ಹನಿಕಡಿಯಂತೆ ಹರಿಯಿತು. ತಲೆ ತಲೆ ಬಡಿದುಕೊಂಡರು. ಮಡದಿ ಇಲ್ಲದ ಅರಮನೆ ಮಸಣಕ್ಕೆ ಸಮನಾಯಿತು. ಕಾಲ ಕಳೆಯಿತು, ವಯಸ್ಸು ಸಂದು ಅವರು ಮುದಿ ಆದರು.

ಸತ್ಯನಾಪುರದ ಬೀಡಿನ ಭೋಗಭಾಗ್ಯಕ್ಕೆ ದಿಕ್ಕು ದಾತಾರರು ಇಲ್ಲದೆ ಹೋಗಿದೆ. ಅಜ್ಜರ ತಲೆ ಕೂದಲು ಇಟ್ಟೇವಿನ ಹೂವಂತಾಗಿದೆ. ಕಣ್ಣು ಬಿಲದಂತಾಗಿದೆ. ಕಾಲು ರೆಂಕದ ಹಿಡಿಗೆ ಸಮನಾಗಿದೆ. ಕೈಗಳು ಸಟ್ಟುಗದ ಹಿಡಿಯಂತಾಗಿವೆ. ಮೂಗಿನಲ್ಲಿ ಕಿರುಜೇನು ನೆಲೆಸಿದೆ. ಅಜ್ಜರಿಗೆ ಮಲಗಿದ ಮಂಚದಿಂದ ಏಳಲಾಗುತ್ತಿಲ್ಲ. ನಿಂತು ನಾಲ್ಕು ಹಜ್ಜೆ ನಡೆಯಲಾಗುತ್ತಿಲ್ಲ. ಮುಜಲೊಟ್ಟು ಬೀಡಿನಲ್ಲಿ ಸತ್ಯನಾಪುರದ ಅರಮನೆಯಲ್ಲಿ ಅರಸು ಮಾಡಿದ ನನಗೆ ~~ಈ~~ ದುರ್ಗತಿ ಬಂದಿತಲ್ಲ ಎಂದು ಕಣ್ಣಲ್ಲಿ ಕಡುದುಃಖ ಇಳಿಸಿದರು. ತನಗೆ ಮೊದಲು ಹುಟ್ಟಿದ ಅಕ್ಕಂದಿರಿಲ್ಲ, ಮತ್ತೆ ಹುಟ್ಟಿದ ತಂಗಿಯಂದಿರಿಲ್ಲ.

ಮಗ್ಗುಲಲ್ಲಿ ಇರುವ ಸೊಸೆಯಂದಿರು ಇಲ್ಲ. ಮೊಣಕಾಲಿನ ಸುತ್ತ ಅಡುವ ಮೊಮ್ಮಕ್ಕಳಿಲ್ಲ. ಸತ್ಯನಾಪುರದ ಅರಮನೆಯಲ್ಲಿ ನಂದಿದ ನಂದಾದೀಪವನ್ನು ಬೆಳಗಿಸುವ ದಾತಾರರು ಇಲ್ಲದೆ ಹೋಯಿತಲ್ಲ ಎಂದು ಕೊರಗಿದರು. ಅಜ್ಜರು ಸುರಿಸಿದ ಕಣ್ಣೀರು ಸಣ್ಣತೋಡಿನಲ್ಲಿ ತುಂಬು ನೆರೆನೀರು ಹರಿದಂತೆ ಹರಿಯಿತು. ಅಜ್ಜರು ಚಾಕರಿಯ ಹೆಣ್ಣು ದಾರುವನ್ನು ಕರೆದರು.

"ಇನ್ನು ಬಹಳ ದಿನ ನಾನು ಬದುಕುವುದಿಲ್ಲ. ಊರು ದೂರ ಆಗಿದೆ. ಕಾಡು ಸಮೀಪ ಆಗಿದೆ. ನಾನು ಮರಳಲ್ಲಿ ಹೋದ ಬೇರು. ನದಿಗೆ ಬಾಗಿದ ಮರ. ಗಾಳಿಗೆ ಒಡ್ಡಿದ ಸೊಡರು. ನನ್ನ ಮನೆತನದ ಗೌರವಕ್ಕೆ ಕುಂದು ಬರದಂತೆ ನೋಡಿಕೊಂಡಿರು, ದಾರು" ಎಂದರು. ಏಳು ನೆಲೆಯ ಯಮಗುಂಡದಲ್ಲಿ ನೆಲಕ್ಕೆ ಮುಖಮಾಡಿ ಬೋರಲಾಗಿ ಮಲಗಿದರು. ಬೆರ್ಮರನ್ನು ಜಾನಿಸುತ್ತಾ ಹೊತ್ತು ಕಳೆದರು.

ಕೆಲಸದಾಕೆ ದಾರು ಧರ್ಮದ ಅನೆಬಾಗಿಲು ಮುಚ್ಚಿದಳು. ಕರ್ಮದ ಕಿರುಬಾಗಿಲು ತೆರೆದಿಟ್ಟಳು. ಬಡಗಣ ಲಂಕೆ ಲೋಕನಾಡ ಜಯವುಳ್ಳ ಬೆರ್ಮದೇವರು ಬಡಬ್ರಾಹ್ಮಣನ ರೂಪು ತಳೆದರು. ಮಾಯದ ಹಿಂಗಾರದ ಹೊಂಬಾಳೆಯಲ್ಲಿ ಹೂವಿನ ಎಸಳು ಇರಿಸಿಕೊಂಡರು. ನಾಲ್ಕು ಮನೆ ಬೇಡುತ್ತಾ ಸತ್ಯನಾಪುರದ ಅರಮನೆಯ ನಡುಅಂಗಳದೆದುರು ಕಾಣಿಸಿಕೊಂಡರು. ತುಳಸಿ ಮಂಟಪದೆದುರು ನಿಂತರು. ಕೈಯಲ್ಲಿ ತಂಬೂರಿ, ತುಟಿಯಲ್ಲಿ ಕೊಳಲು, ಬಾಯಲ್ಲಿ ನಾರಾಯಣ ಪದ ಹಾಡುತ್ತಿದ್ದರು. "ಹಸಿವೆಯಿಂದ ಸೊರಗಿದ್ದೇನೆ, ಬಾಯಾರಿಕೆಯಿಂದ ದಣಿದಿದ್ದೇನೆ. ದಾನ ನೀಡಿರಿ, ಧರ್ಮ ಮಾಡಿರಿ" ಎಂದು ಗೋಳಿಟ್ಟರು. ಇದನ್ನು ಕೇಳಿಸಿಕೊಂಡ ದಾರು ಕಲ್ಲುಕಲೆಂಬಿಯ ಕಂಚಿನ ಬೀಗಕ್ಕೆ ಮಿಂಚುವ ಬೀಗದ ಕೈಹಾಕಿ ಬಾಯಿ ತೆರೆದಳು. ಕಂಚಿನ ಕೈರೆಂಕ ಹಿಡಿದಳು. ತಾಮ್ರದ ಹರಿವಾಣದಲ್ಲಿ ಅಕ್ಕಿ ತುಂಬಿದಳು. ಹಿಡಿಭಿಕ್ಷೆ ಹಿಡಿದು ಬಂದಳು. ಚಾಕರಿಯ ಹೆಣ್ಣು ಭಿಕ್ಷೆ ನೀಡುತ್ತಿರುವುದನ್ನು ಕಂಡ ಬ್ರಾಹ್ಮಣ ಕೋಪದಿಂದ ಕುದಿದರು. ಏಳೇಳು ಲೋಕದ ಕಡುಕೋಪ ಕೋಪಿಸಿದರು. "ನಿನ್ನಂಥ ಚಾಕರಿಯ ಹೆಣ್ಣಿನ ಕೈಯಿಂದ ದಾನ ಹಿಡಿಯುವ ಪರದೇಸಿ ನಾನಲ್ಲ. ಆರಿಯ ಬನ್ನಾಯ ಬೆರ್ಮ ಮಾಲವರೇ ಬರಬೇಕು. ಅವರು ಕೈಯಾರೆ ಭಿಕ್ಷೆ ನೀಡಿ ನನ್ನ ಜೋಳಿಗೆ ತುಂಬಬೇಕು" ಎಂದರು. ದಾರು ಓಡೋಡುತ್ತಾ ಅಜ್ಜರ ಬಳಿಗೆ ಬಂದಳು. ದರ್ಭೆಯ ಕಡ್ಡಿಯಿಂದ ದೇವರ ತೀರ್ಥವನ್ನು ಮಲಗಿದ್ದ ಅಜ್ಜರ ಮೈಗೆ ಹನಿಯಿಸಿದಳು. ಎಂತಹ ಸೋಜಿಗ! ಮಲಗಿದ್ದ ಅಜ್ಜರು ದಿಡ್ಕನೆ ಎದ್ದು ಕುಳಿತರು. ನೆಟ್ಟನೆ ಎದ್ದು ನಿಂತರು. ಅಜ್ಜರಲ್ಲಿ ಹದಿನಾರರ ಉತ್ಸಾಹದ ಉಲ್ಲಾಸ ಕಾಣಿಸಿಕೊಂಡಿತು. ಬಂಗಾರದ ಹರಿವಾಣದಲ್ಲಿ ಗುಂಡುಕಯಮೆ ಅಕ್ಕಿಯನ್ನು ತುಂಬಿಕೊಂಡರು. ಮುಕುಟದ ತೆಂಗಿನಕಾಯಿ ಇರಿಸಿದರು. ಐದು ವೀಳೆಯದೆಲೆ, ಒಂದು ಅಡಿಕೆ, ಮೊಹರುಳ್ಳ ಬೆಳ್ಳಿಯ ನಾಣ್ಯ ಇರಿಸಿದರು.

ಹರಿವಾಣವನ್ನು ಎರಡೂ ಕೈಗಳಿಂದ ಹಿಡಿದುಕೊಂಡು ತೋಳು ಎಳೆದು ವಂದನೆ ಸಲ್ಲಿಸಿದರು. ಬಣ್ಣದ ಚಾವಡಿಯ ಬೋದಿಗೆಯ ಕೆಳಹಲಗೆಯ ಮೇಲೆ ಬ್ರಾಹ್ಮಣರನ್ನು ಕರೆತಂದು ಕುಳ್ಳಿರಿಸಿದರು. ಕೈಕಾಲು ತೊಳೆಯಲು ನೀರಿರಿಸಿದರು. "ದಾನ ಹಿಡಿಯರಿ, ಧರ್ಮ ಪಡೆಯಿರಿ" ಎಂದು ಅಜ್ಜರು ಬ್ರಾಹ್ಮಣರಲ್ಲಿ ಅರಿಕೆ ಮಾಡಿಕೊಂಡರು. ಬ್ರಾಹ್ಮಣ ದಾನವನ್ನು ಪಡೆದುಕೊಂಡರು. ತನ್ನ ಜೋಳಿಗೆಗೆ ಸುರಿದುಕೊಂಡರು. ಅಜ್ಜರ ಬಾಡಿದ ಮೋರೆಯನ್ನು ನೋಡಿದ ಬ್ರಾಹ್ಮಣ, ಕಾರಣ ಕೇಳಿದರು. ಅಜ್ಜರು ತನಗೆ ಸಂತಾನವಿಲ್ಲದ ನೋವನ್ನು ತೋಡಿಕೊಂಡರು. ಬ್ರಾಹ್ಮಣ ತನ್ನ ಜೋಳಿಗೆಯಿಂದ ಹಿಂಗಾರದ ಹೂವನ್ನು ತೆಗೆದರು. ಅದರ ಮೇಲೆ ಒಂದು ಗಂಧದ ಉಂಡೆಯನ್ನು ಇರಿಸಿ ಅಜ್ಜರಿಗೆ ನೀಡಿದರು. ಅಜ್ಜರು ತಾನು ಹೊಡೆದ ಹಚ್ಚಡದ ಸೆಗರು ಬಿಡಿಸಿ ತಲೆಬಾಗಿ ಪ್ರಸಾದ ಹಿಡಿದರು. ಬ್ರಾಹ್ಮಣ ಹೇಳಿದರು. "ಬಿರುವ ಆಳ್ವ ಕೇಳು, ಬಡಗಣ ಲಂಕೆ ಲೋಕನಾಡ ಬೆರ್ಮರ ಆಲಡೆ ನಿನ್ನ ಮೂಲಸ್ಥಾನ. ಅಲ್ಲಿ ಅಡಿಪೊದರು ಬೆಳೆದಿದೆ. ಮೇಲು ಪೊದರು ಹಬ್ಬಿದೆ. ಅಡಿಪೊದರು ಕೆತ್ತಿಸಬೇಕು. ಮೇಲು ಪೊದರು ಕಡಿಸಬೇಕು. ಕಲ್ಲ ಪಂಚಾಂಗಕ್ಕೆ ಹಾರೆ ತಾಗಿಸಬೇಕು. ಬ್ರಹ್ಮರಿಗೆ ಗುಂಡ, ಭೂತಗಳಿಗೆ



ಬದಿಮಾಡ, ನಂದಿಗೋಣನಿಗೆ ಕಲ್ಲಪೀಠ ನೆಡಿಸಬೇಕು. ಬೆರ್ಮರಿಗೆ ಬಲಿ ಉತ್ಸವ ನಡೆಸಬೇಕು. ಅನುಗ್ರಹದ ಗಂಧ ಹಿಂಗಾರ ಪಡೆದುಕೊ" ಎಂದು ಹೇಳಿದ ಬಡಬ್ರಾಹ್ಮಣ ಮುಕ್ಕಾಲು ಮೂರುಗಳಿಗೆಯಲ್ಲಿ ಮಾಯವಾದರು.

ಅಜ್ಜರಿಗೆ ಉಲ್ಲಾಸ ಮರಳಿತು. ಹಿಡಿದಿದ್ದ ಊರುಗೋಲು ಬಿಟ್ಟರು. ಹರ್ಷದ ದನಿ ಬಂದಿತು. ಮುತ್ತಿನ ನಗು ಕಾಣಿಸಿತು. ಓಡಾಡುತ್ತಾ ಹೋಗಿ ಶುದ್ಧ ಜಳಕವಾದರು. ತುಳಸಿಕಟ್ಟೆಯ ಎದುರು ಕಾಲು ಚಾಚಿ ವಂದನೆ ಮಾಡಿದರು. ಕುಲದೈವ ಬೆರ್ಮರನ್ನು ಕಣ್ಣುಮುಚ್ಚಿ ಜಾನಿಸಿದರು. ಊರೊಳಗಿನ ತನ್ನ ಒಕ್ಕಲು ಮಕ್ಕಳನ್ನು ಕರೆಸಿದರು. ಕೈಯಲ್ಲಿ ಹಾರೆ ಪಿಕ್ಕಾಸಿ ಹಿಡಿಸಿದರು. ಲಂಕೆ ಲೋಕನಾಡಿನ ಬೆರ್ಮರ ಗುಂಡದ ಕೆಲಸ ಸಾಗಿತು. ಕುಸಿದು ಬಿದ್ದು ಹೋಗಿದ್ದ ಅಲಡೆ ಹೊಸದಾಗಿ ಎದ್ದು ನಿಂತಿತು. ದೇವರಿಗೆ ದೇವಸ್ಥಾನ, ಬೆರ್ಮರಿಗೆ ಗುಂಡ, ನಂದಿಗೋಣನಿಗೆ ಕಲ್ಲಪೀಠ, ಲೆಕ್ಕೆಸಿರಿಗೆ ಬದಿಮಾಡ, ನಾಗನಿಗೆ ಬನ ಸಿದ್ಧವಾಯಿತು. ಈಶಾನ್ಯ ದಿಕ್ಕಿಗೆ ಬಾವಿ ತೋಡಿಸಿದರು. ಹೊರ ಭಾಗದಲ್ಲಿ ವಿಶಾಲವಾದ ಜಲಕದ ಕೆರೆ ನಿರ್ಮಿಸಲಾಯಿತು. ಮುಂದಿನ ಹುಣ್ಣಿಮೆಯ ರಾತ್ರಿ ಬೆರ್ಮರ ಗುಂಡಕ್ಕೆ ಹೊಸಕಳಸ ಇರಿಸುವುದೆಂದು ನಿಶ್ಚಯವಾಯಿತು. ಅಂದು ಊರಿಗೆ ಊರೇ ಸೇರಿದೆ. ಬಲಿಪೂಜೆ ನಡೆದಿದೆ. ದೈವದ ಪಾತ್ರಿಯ ಮೈಯಲ್ಲಿ ದೈವ ಮೈದುಂಬಿ ಬಂದಿತು. ಅಜ್ಜರಿಗೆ ನಾಲ್ಕು ಶುಭ ನುಡಿ ನುಡಿಯಿತು. ಬೆರ್ಮರ ಅಭಯ ಉಂಟೆಂದು ಹೇಳಿತು. ಅಜ್ಜರಿಗೆ ಹಿಂಗಾರದ ಹೂವಲ್ಲಿ ಗಂಧದ ಗುಳಿಗೆಯ ಪ್ರಸಾದ ನೀಡಿತು. ಅಜ್ಜರು ಸೆರಗು ಹಾಸಿ ಭಕ್ತಿಯಿಂದ ಪ್ರಸಾದ ಪಡೆದರು. ದೈವ ನೀಡಿದ ಪ್ರಸಾದವನ್ನು ಬಂಗಾರದ ಹರಿವಾಣದಲ್ಲಿರಿಸಿದರು. ಭಯ ಭಕ್ತಿಯಿಂದ ತಲೆ ಮೇಲೆ ಇರಿಸಿಕೊಂಡು ಅರಮನೆಗೆ ಬಂದರು. ಅದನ್ನು ಕಲ್ಲಕಲೆಂಬಿಯ ಒಳಗೆ ಜೋಪಾನವಾಗಿ ಇರಿಸಿದರು. ಮರುದಿನ ಮುಂಜಾನೆ ಅಜ್ಜರು ಎದ್ದರು. ಕಲ್ಲ ಕಲೆಂಬಿಯ ಒಳಗೆ ಮಗು ಅಳುವ ದನಿ ಕೇಳಿತು. ಸೋಜಿಗದಿಂದ ಕಲೆಂಬಿಯ ಬಾಯಿ ತೆರೆದರು. ನೋಡುವುದೇನು! ಇಟ್ಟ ಪ್ರಸಾದದಲ್ಲಿ, ಗಂಧದ ಗುಳಿಗೆಯಲ್ಲಿ ಅಳುವ ಮುದ್ದಾದ ಮಗು! ಬಂಗಾರದ ಬೊಂಬೆಯಂತಿರುವ ಹೆಣ್ಣು ಶಿಶು. ಅರಿಯ ಬನ್ನಾಯ ಮೂಲದ ಕುಡಿ ಚಿಗುರಿದುದನ್ನು ಕಂಡ ಅಜ್ಜರು ಮನಸಾರೆ ಸಂತಸಪಟ್ಟರು. ಸತ್ಯದಲ್ಲಿ ಹುಟ್ಟಿದ ಪ್ರೀತಿ ಮೋಹದ ಮಗಳಿಗೆ ಹೆಸರಿಟ್ಟರು. ಸತ್ಯಲೋಕದ ಬಾಲೆಕ್ಕೆ ಸಿರಿ ಎಂದು ಪ್ರೀತಿಯಿಂದ ಕರೆದರು. ಅಜ್ಜರಿಗೆ ಸತ್ಯದ ಮಗಳು ಸಿರಿ ಹುಟ್ಟಿದ ಸುದ್ದಿ ಸತ್ಯನಾಪುರದ ಊರು ಕೇರಿಗಳಲ್ಲಿ ತುಂಬಿತು. ಪಕ್ಕದ ಸೀಮೆ ಮಾಗಣೆಗೆ ತಲಪಿತು. ನಾಲ್ಕು ಊರ ಜನ ಇರುವೆ ಸಾಲಿನಂತೆ ಸಾಲು ಹಿಡಿದು ಬಂದರು. ಊರ ಹೆಂಗಸರು ತೊಟ್ಟಿಲು ಕಟ್ಟಿದರು. ಪದ ಹೇಳಿ ಮಗುವನ್ನು ತೂಗಿದರು.

ಬಸರೂರ ಅರಮನೆಯ ಯಜಮಾನತಿ ಸಂಕರು ಪೂಂಜೆದಿ ಮಗು ನೋಡಲೆಂದು ಬಂದಳು. ಮಗುವಿನ ಚೆಲುವಿಕೆಗೆ ಮನಸೋತಳು. ತೊಟ್ಟಿಲ ಮಗುವಿಗೆ ತೊಟ್ಟಿಲ ಸೀರೆ ಹಾಕಿದಳು. ತೊಟ್ಟಿಲು ಮದುವೆ ಮಾಡಿದಳು. ತನ್ನ ಮಗ ಕಾಂತಣ ಪೂಂಜನಿಗೆ ಮಗುವನ್ನು ನೀಡಬೇಕೆಂದು ಮಾತು ನೀಡಿ ಬಂದಳು.

ಸಿರಿಗೆ ಆರು ವರ್ಷ ತುಂಬಿತು. ಏಳರ ಪ್ರಾಯ ಬಂದಿತು. ಹಿಂದೆ ಆಡಿದ ಮಾತಿನಂತೆ ಬಸರೂರ ಅರಮನೆಯಿಂದ ಸತ್ಯನಾಪುರದ ಅರಮನೆಗೆ ಹೆಣ್ಣು ಕೇಳಲು ಬಂದರು. ಸಿರಿಯನ್ನು ಬಸರೂರ ಬೀಡಿನ ಸೆಟ್ಟಿಪೇಟೆ ಕಾಂತಣ ಪೂಂಜನಿಗೆ ಧಾರೆ ಎರೆದು ಕೊಡುವುದು ಎಂದು ಮಾತಾಯಿತು. ಸಿರಿ ಮದುವೆ ಆಗುವ ಕಾಂತಣ ಪೂಂಜನಿಗೆ ಒಂದು ಶರ್ತ ಇಟ್ಟಳು. "ನನ್ನನ್ನು ಮದುವೆ ಆಗುವ ಗಂಡು ಅಜ್ಜರನ್ನು ಪ್ರೀತಿಯಿಂದ ಹೂವಿನಂತೆ ನೋಡಿಕೊಳ್ಳಬೇಕು. ಸತ್ಯನಾಪುರದ ಅರಮನೆಯನ್ನು ಬೆಳಗಿಸಬೇಕು." ಸಿರಿಯ ರೂಪಕ್ಕೆ ಮರುಳಾದ ಕಾಂತಣಪೂಂಜ ಇದಕ್ಕೆ ಅಡ್ಡ ಮಾತನಾಡದೆ ಒಪ್ಪಿಕೊಂಡ. ಎರಡೂ ಕಡೆಯವರು ಸೇರಿ ಒಳ್ಳೆಯ ದಿನದಂದು ಮದುವೆ 'ನಿಶ್ಚಿತ' ಮಾಡಿದರು. ಅಡಿಕೆ - ವೀಳೆಯದೆಲೆ ವಿನಿಮಯ ಮಾಡಿಕೊಂಡರು. ಮಂಗಳವಾರ ಸಿಂಹರಾಶಿ ಅಮಾವಾಸ್ಯೆ ಫಲಭಾಗದಲ್ಲಿ ಗಳಿಗೆ ಮುಹೂರ್ತ ಇರಿಸಿದರು. ಕೈ ಮುಟ್ಟಿ ಕೈಧಾರೆ, ಮೈ ಮುಟ್ಟಿ ಸೇಸೆ ಎಂದು ನಿಶ್ಚಯ ಮಾಡಿದರು. ಬಂದ ನಂಟರು ಹೊರಡುವಾಗ ಒಳ್ಳೆಯ ಘಳಿಗೆಯಲ್ಲಿ ದಿಬ್ಬಣ ತೆಗೆದುಕೊಂಡು ಬನ್ನಿರೆಂದು ಹೇಳಿ ಹೋದರು.

ಬಸರೂರು ಸೆಟ್ಟಿಕೇರಿಯ ಬೀಡಿನಲ್ಲಿ ಬೆಲ್ಲದ ಒಲೆ ಹೂಡಿದರು. ಪಂಚೋಳಿ ವೀಳೆಯದೆಲೆಯ ಚಪ್ಪರ ಹಾಕಿದರು. ತಳಿರು ತೋರಣ ಕಟ್ಟಿದರು. ಅಮೃತ ಘಳಿಗೆಯಲ್ಲಿ 'ಮುಹೂರ್ತದ ಕಬೆ' ಹಾಕಿಸಿದರು. ಅದೇ ಹೊತ್ತಿಗೆ ಸತ್ಯನಾಪುರದಲ್ಲಿ ಅಜ್ಜರು ದೊಡ್ಡ ಸಂದೋಹ ಸೇರಿಸಿ ದಿಬ್ಬಣ ಹೊರಡಿಸಿದರು. ಕೊಂಬು ಊದಿಸಿಕೊಂಡು ಬ್ಯಾಂಡ್ ಬಿಗಿಲು ಹಾಕಿಸಿಕೊಂಡು ಅಲಂಕಾರಗೊಂಡ ಸತ್ಯಮಾಲೋಕದ ಸಿರಿಯ ದಿಬ್ಬಣ ಹೊರಟಿತು. ರಾವನ್ನ ಗೆಜ್ಜೆಯನ್ನು ಸಿರಿಯ ಕೈಯಲ್ಲಿ ನೀಡಿದರು. ಒಲಿಕೊಡೆ ತಲೆಗೆ ಹಿಡಿದರು. ಸತ್ಯದ ದಂಡಿಗೆಯಲ್ಲಿ ಸಿರಿಯನ್ನು ಕುಳ್ಳಿರಿಸಿದರು. ದಿಬ್ಬಣ ಬಸರೂರ ಅರಮನೆಯತ್ತ ಹೊರಟಿತು. ಸಂಕರು ಪೂಂಜೆದಿಯ ಅರಮನೆಯ ಬಾಕಿಮಾರು ಗದ್ದೆಗೆ ದಿಬ್ಬಣ ತಲಪಿತು. ಎದುರಿಗೆ ಆರತಿ ಬಂದಿತು. ಮದುಮಗಳಿಗೆ ಆರತಿ ತೋರಿಸಿದರು. ದಂಡಿಗೆಯಿಂದ ಹೆಣ್ಣನ್ನು ಇಳಿಸಿ ಚಪ್ಪರಕ್ಕೆ ಕರೆತಂದರು. ಕಾಲಿಗೆ ನೀರು ಎರೆದರು. ಸಂಕರು ಪೂಂಜೆದಿ ಸಿರಿಯನ್ನು ಬಲಕೈಯಲ್ಲಿ

ಹಿಡಿದುಕೊಂಡು ಬಲಕಾಲು ಮುಂದೆ ಹಾಕಿಸಿಕೊಂಡು ಚಪ್ಪರಕ್ಕೆ ಹೊಗ್ಗಿಸಿದಳು. ಹೊಕ್ಕ ದಿಬ್ಬಣದ ಮಂದಿಗೆ ಕಪಿಲೆ ದನದ ಹಾಲನ್ನು ಕುಡಿಯಲು ಇತ್ತರು.

ಮದುಮಕ್ಕಳ ಧಾರೆಗೆ ಸಕಲ ಸಿದ್ಧತೆ ನಡೆಯಿತು. ಇಬ್ಬರೂ ಕಣ್ತುಂಬ ಸಿಂಗರಗೊಂಡರು. ಧಾರೆಯ ಮಂಟಪದಲ್ಲಿ ಮದುಮಕ್ಕಳನ್ನು ಕುಳ್ಳಿರಿಸಿದರು. ನಾಲ್ಕೂರ ಗುರಿಕಾರರು ಚಪ್ಪರದಲ್ಲಿ ಸೇರಿದರು. ಆರಿಯ ಬನ್ನಾರ್ ಬಿರುಮ ಆಳ್ವರು ಮೈ ಮುಟ್ಟಿ ಸೇಸೆ ಹಾಕಿದರು. ಕೈಮುಟ್ಟಿ ಕೈಧಾರೆ ಹೊಯ್ದರು. ಹೆಣ್ಣು ಗಂಡಿನ ಕುಲನಾಮಗಳನ್ನು ಉಚ್ಚರಿಸಿದರು. ಆರಿಯ ಬನ್ನಾಯ ಬಳಿಯ ಸತ್ಯಮಾಲೋಕದ ಅಕ್ಕೆರಸು ಸಿರಿಯನ್ನು ಬಸರೂರು ಸೆಟ್ಟಿಕೇರಿ ಬೀಡಿನ ಪುತ್ರಬನ್ನಾಯ ಬಳಿಯ ಕಾಂತಣ ಪೂಂಜನಿಗೆ ಮದುವೆ ಮಾಡಿದರು.

ಅಜ್ಜರು ತಂದ ದಿಬ್ಬಣ ಸತ್ಯನಾಪುರದತ್ತ ಮುಖಮಾಡಿ ಹೊರಡಲು ಸಿದ್ಧವಾಯಿತು. ಅಜ್ಜರು ಸಿರಿಗೆ ನಾಲ್ಕು ಬುದ್ಧಿಯ ಮಾತುಗಳನ್ನು ಆಡಿದರು. ಬಸರೂರ ಅರಮನೆಯಲ್ಲಿ ಸಿರಿ-ಕಾಂತಣ



ಪೂಂಜರು ನಾಲ್ಕು ದಿನ ಸುಖ ಸಂತೋಷದಲ್ಲಿ ಇದ್ದರು. ಹೀಗಿರುವಾಗ ಕಾಂತಣನಿಗೆ ಪದಂಗಡಿದ ಸೂಳೆ ಸಿದ್ದುವಿನ ಸ್ನೇಹ ಆರಂಭವಾಯಿತು. ಸಿರಿ ಕೈ ಹಿಡಿದ ಗಂಡನಿಗೆ ಬುದ್ಧಿ ಹೇಳಿದಳು. ಸಿದ್ದುವಿನ ಸಂಗ ಬಿಡುವಂತೆ ಬಗೆ ಬಗೆಯಲ್ಲಿ ಹೇಳಿದಳು. ಆದರೆ ಕಾಂತಣನ ಬುದ್ಧಿ ತಿಳಿಯಾಗಲಿಲ್ಲ. ಬುದ್ಧಿ ಮರಳಲಿಲ್ಲ.

ಸಿರಿಯ ಮದುವೆ ಆಗಿ ಒಂದು ವರ್ಷದ ಮೇಲೆ ಆರು ತಿಂಗಳು ಕಳೆಯಿತು. ಸಿರಿಯ ತಿಳಿಯಾದ ಮುಖದಲ್ಲಿ ಕಳೆ ತೋರಿತು. ಬಟ್ಟಲುಬಸಿರು ರೂಪು ಪಡೆಯಿತು. ಆರು ತಿಂಗಳು ಕಳೆದು ಏಳು ಹಿಡಿಯಿತು. ಬಸಿರ ಬಯಕೆಗೆ ಒಳ್ಳೆಯ ದಿನವಿಟ್ಟು ಕಾಂತಣ ಅಜ್ಜರಿಗೆ ಹೇಳಿ ಕಳುಹಿಸಿದ. ತಾಯಿ ಸಂಕರು ಪೂಂಜೆದಿ ಹೇಳಿದಂತೆ ಸೀಮಂತಕ್ಕೆ ಸೀರೆ, ಚೆಂಡು ಮಲ್ಲಿಗೆ, ದೇವ ಕೇದಗೆ ತರುವುದಾಗಿ ಹೇಳಿ ಬಟ್ಟೆಯ ಅಂಚಿನಲ್ಲಿ ಸಾವಿರ ವರಹ ಕಟ್ಟಿಕೊಂಡು ಹೊರಟನು. ಗಳಿಗೆ ಸಮಯದಲ್ಲಿ ನಿಮಿಷ ಹೊತ್ತಿನಲ್ಲಿ ಬರುವುದಾಗಿ ಹೇಳಿ ಪದಂಗಡಿಪೇಟೆಗೆ ಬಂದ. ಸೀಮಂತಕ್ಕೆ ಬೇಕಾದ ಸಾಮಾನುಗಳನ್ನು ಸಂಗ್ರಹಿಸಿದ. ಬರುವಾಗ ಸೂಳೆ ಸಿದ್ದುವಿನ ಮನೆಯ ಎದುರಿಂದಲೇ ಬಂದ. ಆಕೆ ಕಣ್ಣಿನ ಸನ್ನೆಯಲ್ಲಿ ಕೈಯ ಭಾಷೆಯಲ್ಲಿ ಕರೆದಳು. ಕೈ ಹಿಡಿದು ಮನೆಯೊಳಗೆ ಕರೆದುಕೊಂಡು ಬಂದಳು. "ಆಸರು ತಣಿಸಿಕೊಳ್ಳಿ, ಆಯಾಸ ಪರಿಹರಿಸಿಕೊಳ್ಳಿರಿ, ಪೂಂಜರೆ" ಎಂದಳು ಸೂಳೆ ಸಿದ್ದು. ಪೂಂಜ ಮನೆಯ ಒಳಗಿನ ಸೂತ್ರವನ್ನು ಪ್ರವೇಶಿಸಿದ. ತೂಗುಯ್ಯಾಲೆಯಲ್ಲಿ ಕುಳಿತ. ಸಿದ್ದು ಗಿಂಡಿಯಲ್ಲಿ ನೀರು, ಬಟ್ಟಲಲ್ಲಿ ಹಾಲು, ಹರಿವಾಣ ತುಂಬ ಬಾಳೆಯ ಹಣ್ಣು ತಂದಿರಿಸಿದಳು. "ನನಗೆ ಕಾಲ ವಿಳಂಬವಾಗುತ್ತಿದೆ, ಸಮಯ ಮೀರುತ್ತದೆ" ಎಂದು ಪೂಂಜರು ಹೇಳಿದರು. ಬಿಸಿಲಿನ ಕಾವು ತಗ್ಗಲಿ, ಗಾಳಿ ಬೀಸಲಿ, ಬಾಯಾರಿಕೆ ಹಿಂಗಿಸಿಕೊಳ್ಳಿರಿ ಪೂಂಜರೆ" ಎಂದು ಸಿದ್ದು ಪೂಂಜನನ್ನು ರಮಿಸಿದಳು. ಕುಳಿತ ಪೂಂಜ ಬಾಯಿ ತಂಬುಲವನ್ನು ಉಗಿದ. ಹಾಲು ಕುಡಿದು, ಆಸರು ತಣಿಸಿಕೊಂಡ.

"ಎಲ್ಲಿಗೆ ಹೊರಟಿರಿ ಪೂಂಜರೆ? ಏನು ಕಜ್ಜಕಾರ್ಯದಲ್ಲಿ ಬಂದಿರಿ" ಎಂದು ಸಿದ್ದು ವಯ್ಯಾರದಿಂದ ಕೇಳಿದಳು. "ನನ್ನ ಮೋಹದ ಮಡದಿ ಸಿರಿಯ ಬಯಕೆ ಮದುವೆಗೆ ಅರುವತ್ತು ಮೊಳದ ಪಟ್ಟೆ ಸೀರೆ, ಚೆಂಡು ಮಲ್ಲಿಗೆ, ದೇವ ಕೇದಗೆ ತರಲು ಬಂದೆ" ಎಂದನು. ಅಂತಹ ಸೀರೆ - ರವಕೆಯನ್ನು ನಾನೊಮ್ಮೆ ನೋಡಬೇಕಲ್ಲ ಎಂದು ಸಿದ್ದು ಪೂಂಜನ ಕೈಯಿಂದ ಸೀರೆಯ ಕಟ್ಟನ್ನು ತೆಗೆದುಕೊಂಡಳು. ಪಟ್ಟೆಯ ಸೀರೆಯ ಮಡಿಕೆ ಬಿಡಿಸಿದಳು. "ಇಂತಹ ಸೊಗಸಾದ ಹಳದಿ ಬಣ್ಣದ ಪಟ್ಟೆ ಸೀರೆಯನ್ನು ನಾನೊಮ್ಮೆ

ಉಡಬೇಕು. ನನ್ನ ಅಂದ ಚಂದವನ್ನು ನೀವೊಮ್ಮೆ ನೋಡಬೇಕು ಪೂಂಜರೆ. ಅಷ್ಟೇ ಅಲ್ಲ, ನಾನೂ ನೀವೂ ಜೊತೆಯಾಗಿ ಈ ತೂಗುಯ್ಯಾಲೆಯಲ್ಲಿ ಕುಳಿತುಕೊಳ್ಳಬೇಕು. ಉಲ್ಲಾಸದಿಂದ ನಾನೂ ನೀವೂ ಚೆನ್ನೆ ಆಟ ಆಡಬೇಕು" ಎಂದಳು. ನನಗೆ ಕಾಲ ಮೀರುತ್ತಿದೆ. ಬಯಕೆ ಮದುವೆಯ ಮುಹೂರ್ತ ಸಮೀಪಿಸಿತು. ನಾನು ಹೊರಡುತ್ತೇನೆ." ಎಂದು ಪೂಂಜ ಹೇಳಿದ.

ಹೀಗೆ ಮಾತು ಸಾಗುತ್ತಿದ್ದಂತೆ ಸಿದ್ದು ಸಿರಿಗೆಂದು ತಂದಿದ್ದ ಬಯಕೆ ಮದುವೆಯ ಸೀರೆಯನ್ನು ಉಟ್ಟಳು. ಅದಕ್ಕೆ ಒಪ್ಪುವ ರವಕೆ ತೊಟ್ಟಳು. ಅವಳ ರಂಗುರಂಗಿನ ಮಾತಿನ ಸೆಳೆತದಲ್ಲಿ ಬಯಕೆ ಸೀರೆಯನ್ನು ಸೂಳೆ ಸಿದ್ದು ತನ್ನ ಮೈಗೆ ಉಟ್ಟುದು ತಿಳಿಯಲೇ ಇಲ್ಲ. "ಆಯುಷ್ಯ ಇದ್ದರೆ ಇನ್ನೆರಡು ದಿನಗಳಲ್ಲಿ ಬರುವೆ" ಎಂದು ಹೇಳುತ್ತಾ ಪೂಂಜ ಆಕೆ ಉಟ್ಟು ಮಡಚಿ ನೀಡಿದ ಸೀರೆಯ ಕಟ್ಟನ್ನು ಹಿಡಿದುಕೊಂಡು ಬಂದ.

"ನನ್ನ ಮಡದಿ ಸಿರಿಯ ಮೈಗೆ ಒಪ್ಪುವ ಪಟ್ಟೆ ಸೀರೆ, ರವಕೆ ತಂದಿರುವೆ" ಎಂದು ಕಾಂತಣ ತಾಯಿಯ ಕೈಗೆ ನೀಡಿದ. ಅಂದು ಕಳೆಯಿತು. ಮರುದಿನ ಬೆಳಗಿನ ನಸುಕಿನ ಶುಭಗಳಿಗೆಯಲ್ಲಿ ಗುರಿಕಾರರನ್ನು ಸೇರಿಸಿಕೊಂಡು ಸಂಕರು ಪೂಂಜೆದಿ ಸತ್ಯನಾಪುರಕ್ಕೆ ಹೊರಟಳು. ಬಂಗಾರದ ಹರಿವಾಣದಲ್ಲಿ ಪಟ್ಟೆ ಸೀರೆ, ದೇವಕೇದಗೆ ಹೂ, ಚೆಂಡು ಮಲ್ಲಿಗೆ ಹೂ ಹಿಡಿದುಕೊಂಡು ಸತ್ಯನಾಪುರ ತಲುಪಿದಳು. ಸತ್ಯನಾಪುರದಲ್ಲಿ ಹೋದ ನಂಟರಿಗೆ ಕೈಗೆ ಕಾಲಿಗೆ ನೀರು ನೀಡಿದರು. ಪೂಸಿದ ಹಲಗೆ (ಬಾಜಿರ) ಯಲ್ಲಿ ಸಕ್ಕಣಚಾಪೆ ಹಾಸಿ ಕೊಟ್ಟರು. ಸತ್ಯಮಾಲೋಕದ ಸಿರಿಗೆ ಒಳ್ಳೆಯ ಗಳಿಗೆಯಲ್ಲಿ ಬಸಿರ ಬಯಕೆ, ಬಾಯಿಯ ಅಸೆ ನೆರವೇರಿಸಿದರು. ಚೆಂಡು ಮಲ್ಲಿಗೆ ಮುಡಿಸಿದರು. ಪಟ್ಟೆಯ ಹೂ ಸೀರೆ ಅತ್ತೆ ಸಂಕರು ಪೂಂಜೆದಿ ನೀಡಿದಳು.

ಸಿರಿ ಅವುಗಳನ್ನು ಕೈಯಲ್ಲಿ ಮುಟ್ಟಲಿಲ್ಲ, ಕಣ್ಣಿಂದ ನೋಡಲಿಲ್ಲ. "ಅತ್ತೆಯವರೆ, ನಿಮ್ಮ ಮಗ, ನನ್ನ ಗಂಡ ಈ ಪಟ್ಟೆಸೀರೆ, ಚೆಂಡು ಮಲ್ಲಿಗೆ, ದೇವ ಕೇದಗೆಗಳನ್ನು ನನಗಾಗಿ ತಂದುದಲ್ಲ. ಅವು ಪದಂಗಡಿ ಪೇಟೆ ಸೂಳೆ ಸಿದ್ದುಗೆ ತಂದವುಗಳು" ಎಂದು ಎತ್ತಿದ ದನಿಯಲ್ಲಿ ದೂಷಣೆ ಮಾಡಿದಳು. ಇದನ್ನು ಕೇಳಿಸಿದ ಸಂಕರು ಪೂಂಜೆದಿ "ಸಿರಿಯೇ ಹೀಗೆ ಚಲ ಹಿಡಿಯಬೇಡ, ಗಂಡನ ಬಗ್ಗೆ ಕಲೆ ಹೇಳಬೇಡ, ದೂಷಣೆ ಮಾಡಬೇಡ" ಎಂದು ನಾಲ್ಕು ಬುದ್ಧಿ ಮಾತುಗಳನ್ನು ಆಡಿದಳು.

"ಪದಂಗಡಿ ಪೇಟೆಯ ಸೂಳೆ ಸಿದ್ದು ಮಡಿಕೆ ಮಡಚಿ ಕೆಡಿಸಿದ ಮೈಲಿಗೆ ಸೀರೆ ರವಕೆಯಿದು. ಅಂಥ ರವಕೆ ಸೀರೆಗಳನ್ನು ನಾನು ಮುಟ್ಟಲಾರೆ, ಮೈಯಲ್ಲಿ ಉಡಲಾರೆ. ಚೆಂಡು ಮಲ್ಲಿಗೆಯನ್ನು ತಲೆಯ ಮೇಲೆ ಇರಿಸಲಾರೆ, ಅತ್ತೆಯವರೆ" ಎಂದು ಹಟ ಹಿಡಿದಳು. ಸಂಕರು ಪೂಂಜೆದಿ ಬಗೆ ಬಗೆಯಲ್ಲಿ ರಮಿಸಿ ಹೇಳಿದರೂ ಸಿರಿ ಬಯಕೆಯ ಸೀರೆಯನ್ನು ಕೈಯಲ್ಲಿ ಮುಟ್ಟಿಯೂ ನೋಡಲಿಲ್ಲ. ನನ್ನ ಅಜ್ಜರು ನನಗೆ ಇಂದಿನವರೆಗೆ ಯಾವುದರಲ್ಲೂ ಕಡಿಮೆ ಮಾಡಲಿಲ್ಲ. ಇನ್ನು ಮುಂದೆಯೂ ನನಗೆ ಈ ಅರಮನೆಯಲ್ಲಿ ಯಾವುದಕ್ಕೂ ಕೊರತೆ ಬರಲಾರದು" ಎಂದು ಸಿರಿ ಅತ್ತೆಯವರಿಗೆ ಹೇಳಿದಳು. ನಾಲ್ಕು ಊರ ಗುತ್ತಿನವರು, ಗುರಿಕಾರರು ಸೇರಿದ ಸಭೆಯಲ್ಲಿ ಹೀಗೆ ಮಾತಾಡುವುದು ಸರಿಯಲ್ಲ ಎಂದು ಅಜ್ಜರು ಹೇಳಿದರು. ಅದಕ್ಕೆ ಸಿರಿ "ಅಜ್ಜರೆ, ನಾನು ಮಾಯದಲ್ಲಿ ಹುಟ್ಟಿ ಮಾಯದಲ್ಲಿ ಬೆಳೆದವಳು. ಸತ್ಯದಲ್ಲಿ ಉದಯಿಸಿದವಳು. ನೆತ್ತರದಲ್ಲಿ ಹುಟ್ಟಿ ನೀರಿನಲ್ಲಿ ಬೆಳೆದವಳಲ್ಲ. ಅಂದಿನಿಂದ ಇಂದಿನವರೆಗೂ ಅಜ್ಜರೆ ನನಗೆ ಯಾವುದಕ್ಕೂ ಕೊರತೆ ಬರಲಿಲ್ಲ. ನಿಮ್ಮ ಅರಮನೆಯಲ್ಲಿರುವ ಸಾವಿರ ವರಹದ ಅರುವತ್ತು ಮೊಳದ ಪಟ್ಟೆ ಸೀರೆಯನ್ನು ಉಡುವೆ" ಎಂದು ಹೇಳಿದಳು. ಸಿರಿ ಅಜ್ಜರ ಕಲ್ಲಕಲೆಂಬಿಯೊಳಗಿರುವ ಸೀರೆಯನ್ನು ತೆಗೆದಳು. ಅದಕ್ಕೆ ತಕ್ಕ ಬಂಗಾರದ ಆಭರಣ ತೊಟ್ಟಳು. ಅಯಿತ ಸಿಂಗಾರ ಆದಳು. ಅಜ್ಜರು ಸಿರಿಯ ಬಸಿರ ಬಯಕೆ ಈಡೇರಿಸಿದರು. ಬಂದ ಸಭೆಗೆ ಹೊಟ್ಟೆ ತುಂಬ ಸೊಗಸಾದ ಊಟ ಬಡಿಸಿದರು. ಬಂದ ನಂಟರಿಷ್ಟರು ಉಂಡ ಎಂಜಲಿಗೆ ವೀಳೆಯದೆಲೆ ಮೆದ್ದರು. ಮರಳಿ ನಡೆದರು. ಬಾಲಕೆ ಸಿರಿಯನ್ನು ಅತ್ತೆ ಸಂಕರು ಪೂಂಜೆದಿ ಕುಳಿತ ಮಂಟಪದಿಂದ ಎಬ್ಬಿಸಿದಳು. ಒಳ್ಳೆ ವೇಳೆ ಗಳಿಗೆಯಲ್ಲಿ ನಾವು ಬಸರೂರ ಬೀಡಿಗೆ ಹೋಗೋಣ ಎಂದು ಒತ್ತಾಯಿಸಿದಳು. ಅದಕ್ಕೆ ಸಿರಿ "ಅಯ್ಯಾ ಅತ್ತೆಯವರೆ, ಕೇಳಿರೆ, ನನಗೆ ಇಂದಿನ ದಿನ ನಡೆದು ನಾಲ್ಕು ಹೆಜ್ಜೆ ಇಡಲು ಆಗುತ್ತಿಲ್ಲ. ನೀವು ಹೋಗಿರಿ, ಅತ್ತೆಯವರೆ. ನಾನು ಬರಲಾರೆ. ಎರಡು ದಿನ ಕಳೆದು ನನ್ನ ಗಂಡ ಬಂದರೆ ನಾನು ಅವರ ಜತೆ ಬರುತ್ತೇನೆ. ಇಂದಿನ ದಿನ ಬರುವುದಕ್ಕೆ ನನಗೆ ದೇವರು ಬ್ರಹ್ಮರ ಮಾಯದ ಅಪ್ಪಣೆ ಇಲ್ಲ" ಎಂದು ಕಟುವಾಗಿಯೇ ನುಡಿದರು. ಬೇರೆ ದಾರಿ ಕಾಣದೆ ಅಡ್ಡಮೋರೆ ಹಾಕಿಕೊಂಡು ಕಣ್ಣೀರು ಇಳಿಸುತ್ತಾ ಸಂಕರು ಪೂಂಜೆದಿ ಮರಳಿ ತನ್ನ ಅರಮನೆಗೆ ಬಂದಳು.

ಸಿರಿಯನ್ನು ಕರೆದುತಾರದ ತಾಯಿಯನ್ನು ಕಂಡ ಕಾಂತಣ್ಣಪೂಂಜ ಸಿರಿ ಏಕೆ ಬಂದಿಲ್ಲ ಎಂದು ಕೇಳಿದ. ಸಂಕರು ಪೂಂಜೆದಿ ಸತ್ಯನಾಪುರದ ಅರಮನೆಯಲ್ಲಿ ನಡೆದ ಸಂಗತಿಯನ್ನು ಬಿಡಿಸಿ ಹೇಳಿದಳು. ಕೈಹಿಡಿದ ಗಂಡ ತಂದ ಪಟ್ಟೆ ಸೀರೆಯನ್ನು ಬಿಟ್ಟು ಅಜ್ಜರ ಅರಮನೆಯಲ್ಲಿದ್ದ ಪಟ್ಟೆ ಸೀರೆಯನ್ನೇ

ಉಟ್ಟಳೆಂದು ಸಂಕರು ಪೂಂಜೆದಿ ಹೇಳಿದಳು.

ನಾಲ್ಕೂರ ಮಂದಿ ಸೇರಿದ ಸಭೆಯಲ್ಲಿ ಕೈ ಹಿಡಿದ ಹೆಂಡತಿ ಗಂಡನ ದೂಷಣೆ ಮಾಡಿದುದನ್ನು ಕೇಳಿದ ಪೂಂಜನಿಗೆ ಕೋಪ ಏರಿತು. ಕಣ್ಣುಗಳು ಕುಣಿದುವು. ಕಾಂತು ಪೂಂಜ "ನಾನು ಕೈ ಹಿಡಿದ ಸಿರಿ ದಾಡೆ ಮೀರಿದ ದೋಡೆ, ತವರಿನ ಅಂಕೆಯಿಲ್ಲದ ಹೆಣ್ಣು, ಸಂಬಾರ ಮೀರಿದ ಮೇಲೋಗರ, ಶುಂಠಿ ಮೀರಿದ ಕಷಾಯ, ಮನೆಯಿಂದ ದೊಡ್ಡ ಮೆಟ್ಟಲು. ನನಗೆ ಹೇಳಬಾರದ ಮಾತು ಆಡಿದಳು. ಮಾಡಬಾರದ ದೂಷಣೆ ಮಾಡಿದಳು. ನಾನು ಯಾವ ಕಾಲಕ್ಕೂ ಆ ಸತ್ಯನಾಪುರದ ಮೆಟ್ಟುಕಲ್ಲನ್ನು ಹತ್ತಲಾರೆ" ಎಂದು ಭಾಷೆ ಹಾಕಿ ಮೀಸೆ ತಿರುವಿದನು.

ಸತ್ಯಮಾಲೋಕದ ಸಿರಿಗೆ ಏಳು ಎಂಟು ತಿಂಗಳು ತುಂಬಿತು. ಒಂಬತ್ತು ತಿಂಗಳು ಹಿಡಿಯಿತು. ಒಂಬತ್ತು ತಿಂಗಳು ಒಂಬತ್ತು ದಿನ ಒಂಬತ್ತು ಗಳಿಗೆ, ಒಂಬತ್ತು ನಿಮಿಷದಲ್ಲಿ ಸಿರಿಯ ಮುದ್ದು ಮೋರೆಯಲ್ಲಿ ಬೇನೆಯ ಮೈಲಿಗೆ ಕಾಣಿಸಿತು. ಮಂಗಳವಾರದ ದಿನ, ಅಮಾವಾಸ್ಯೆಯ ಫಲ, ಸಿಂಗರಾಶಿಯಲ್ಲಿ ಗಂಡಾಂತರದ ನಕ್ಷತ್ರದ ಫಲದಲ್ಲಿ ಸತ್ಯನಾಪುರುದ ಅರಮನೆಯಲ್ಲಿ ಬಾಲಕ್ಕೆ ಸಿರಿ ಗಂಡು ಮಗುವನ್ನು ಹಡೆದಳು. ಅಜ್ಜರು ಮನದಲ್ಲಿ ಹಿಗ್ಗಿದರು. ಅಜ್ಜರು ಕಾಂತಣ್ಣನಿಗೆ ಅಂತರಂಗದ ಓಲೆ ಕಳುಹಿಸಿದರು. ಬಹಿರಂಗದ ಅಳು ಬಿಟ್ಟರು. ಕಾಂತಣ ಮಗುವಿನ ಮುಖ ನೋಡಲು ಬಾರದಿರುವುದನ್ನು ಕಂಡು ಅಜ್ಜರು ಮತ್ತೆ ಜನ ಕಳುಹಿಸಿದರು. ಕಾಂತಣ್ಣ ಅಜ್ಜ ಕಳುಹಿಸಿದ ಓಲೆಯನ್ನು ಬಿಡಿಸಿಯೂ ನೋಡಲಿಲ್ಲ. ಮಗು ಹುಟ್ಟಿದ ಹನ್ನೊಂದನೆ ದಿನ ಅಜ್ಜರು ಜೋಯಿಸರಲ್ಲಿಗೆ ಹೋದರು. ಮಗುವಿನ ಜನ್ಮ ನಕ್ಷತ್ರ ತೋರಿಸಿದರು. ಗಂಡಾಂತರದ ಗಳಿಗೆಯಲ್ಲಿ, ಮೂಲ ನಕ್ಷತ್ರದಲ್ಲಿ ಹುಟ್ಟಿದ ಮಗುವಿನಿಂದ ಕುಟುಂಬದ ಮೂಲಕ್ಕೇ ತೊಂದರೆ ಬರಬಹುದು. ಮಗುವಿನ ಮುಖ ನೋಡಿದರೆ ಅಜ್ಜರಿಗೆ ಸಾವು ಬರಬಹುದು. ತಾಯಿಗೆ ದೇಶಾಂತರ ಹೋಗುವ ದುಃಸ್ಥಿತಿ ಬರಬಹುದು. ತಂದೆಯ ಬುದ್ಧಿ ಕೆಡಬಹುದು" ಎಂದು ಜೋಯಿಸರು ನುಡಿದರು. ಮಗು ಅಜ್ಜರ ಕಣ್ಣಿಗೆ ಬೀಳದಂತೆ ಸಿರಿ ಎಚ್ಚರಿಕೆ ವಹಿಸಿದಳು.

ಹುಟ್ಟಿದ ಮಗುವಿಗೆ ಅಜ್ಜರು ಮೋಹದ ಹೆಸರು ಇರಿಸಿದರು. ಮಾಯಾದ ಮಗು ಸತ್ಯದ ಕುಮಾರ ಎಂದು ಹೆಸರಿಟ್ಟರು. ಅಂದಿಗೆ ಸಿರಿ ಹೆತ್ತು ಹದಿನಾರನೆ ದಿನ. ಬಾಲಕ್ಕೆ ಸಿರಿ ಅಡ್ಡ ಹಾಕಿದ್ದ ಮೆಲುದವನ್ನು ನೀಟ ಹಾಕಿಕೊಂಡಳು. ಕೈಯಲ್ಲಿ ರಾವನ್ನ ಗೆಜ್ಜೆಕತ್ತಿ ಹಿಡಿದುಕೊಂಡಳು. ಮಗುವಿನ

ಕೊಳೆಬಟ್ಟೆ ಒಗೆಯಲು ತೋಡಿನ ಬಳಿಗೆ ಹೋದಳು. ದಾರು ಹಸುವಿನ ಹಾಲು ಕರೆಯಲು ಹೋದಳು. ತೊಟ್ಟಿಲ ಮಗುವಿಗೆ ಎಚ್ಚರ ಆಯಿತು. ಮಗು ಎದ್ದುಬಿದ್ದು ಚೀರ ತೊಡಗಿತು. ಮಗು ಕುಮಾರ ಅಳುತ್ತಿರುವುದು ಮಂಚದಲ್ಲಿ ಮಲಗಿದ್ದ ಅಜ್ಜರಿಗೆ ಕೇಳಿಸಿತು. ನನ್ನ ಸಿರಿ ಎಲ್ಲಿಗೆ ಹೋದಳೆಂದು ಅಜ್ಜರು ಮಗು ಮಲಗಿದಲ್ಲಿಗೆ ನಡೆದರು. ಮಗುವನ್ನು ಕೈಯಲ್ಲಿ ಎತ್ತಿಕೊಂಡರು. ಹೊರಗಿನ ಚಾವಡಿಗೆ ಬಂದರು. ಮಗುವನ್ನು ಕೈಯಾರೆ ಎತ್ತಿ ತಕ್ಕಯಿಸಿದರು. ಮಗು ಕೈಯಲ್ಲಿ ಇದ್ದಂತೆ ಅಜ್ಜರು ಮೂರ್ಛೆ ಹೋದರು. ಮುಖ ಅಡಿಯಾಗಿ ಕುಸಿದು ಬಿದ್ದರು. ಮಗುವಿನ ಕೊಳೆ ಬಟ್ಟೆಯನ್ನು ಒಗೆದು ಬಿಸಿಲಿಗೆ ಒಣಗಿಸಿ ಸಿರಿ ಒಳಗೆ ಬರುವಾಗ ಅಜ್ಜರು ಮಗುವನ್ನು ತಬ್ಬಿಕೊಂಡು ಬಿದ್ದಿದ್ದಾರೆ. ಭೋದ ತಪ್ಪಿದೆ. ಅದನ್ನು ಕಂಡ ಸಿರಿ ತಲೆ ತಲೆ ಬಡಿದುಕೊಂಡಳು. ಅಯ್ಯಯ್ಯಾ ಪಾಪವೆ ಅಕಟಕಟ ದೋಷವೆ ! ನನ್ನ ಅಜ್ಜರಿಗೆ ಅದಂತಹ ಸಂಕಟ ಬಂತಪ್ಪಾ" ಎಂದು ಅತ್ತು ಕೀರಿದಳು.

ಬೆಳ್ಳಿಯ ಸಿರಿಗಿಂಡಿಗೆ ಸಿರಿ ನೀರು ತುಂಬಿದಳು. ತುಲಸಿಯ ಕುಡಿ ಹಾಕಿದಳು. ಅಜ್ಜರ ಬಾಯಿಗೆ ನೀರು ಬಿಟ್ಟಳು. ಅಜ್ಜರು ಕಾಯ ಬಿಟ್ಟು ಕೈಲಾಸಕ್ಕೆ ಸಂದರು.

ಕೈಹಿಡಿದ ಗಂಡ ಕಾಂತಣ ಪೂಂಜನಿಗೆ ಸುದ್ದಿ ತಲಪಿಸಿದಳು. ಅಜ್ಜರ ಕೊನೆಯ ಕೆಲಸಕ್ಕೆ ಬರಬೇಕೆಂದು ಓಲೆ ಬರೆಯಿಸಿದಳು. ಕಾಂತಣ ಸತ್ಯನಾಪುರದ ಅರಮನೆಗೆ ಕಾಲು ಹಾಕಲಿಲ್ಲ. ಹೆಂಡತಿಯ ಓಲೆಗೆ ಬೆಲೆ ಕೊಡಲಿಲ್ಲ.

ಸೂಡದ ಬೀಡಿನ ಯಜಮಾನ ಅಣು ಸೆಟ್ಟಿ. ಅವರ ಹೆಂಡತಿ ಬೊಮ್ಮಿ. ಬೊಮ್ಮಿ ಸತ್ಯನಾಪುರದ ಅಜ್ಜರಿಗೆ ದೂರದಲ್ಲಿ ತಂಗಿ. ಅವಳ ಮಗ ಸಂಕರ ಅಳ್ವ. ಅವನಿಗೆ ಸತ್ಯನಾಪುರದ ಅರಮನೆಯ ಅಧಿಕಾರ ಹಿಡಿವ ಆಸೆ. ಅಲ್ಲಿನ ನಗನಾಣ್ಯಗಳ ಮೇಲೆ ಕಣ್ಣು. ಸಿರಿಯನ್ನು ಮದುವೆ ಮಾಡಿಕೊಳ್ಳುವ ಆಸೆ ಅವನಿಗೆ. ಸಿರಿಯ ಮದುವೆ ಕಾಂತಣ ಪೂಂಜನ ಜತೆ ನಡೆದುದನ್ನು ಕೇಳಿದ ಅತ ಅಸಹನೆಯಿಂದ ಕುದಿಯುತ್ತಿದ್ದ. "ಸಿರಿ ನನಗೆ ಹಕ್ಕಿನ ಹೆಣ್ಣು. ಮದುವೆ ಮಾಡಿ ಕೊಡಬೇಕು" ಎಂದು ಕೇಳಿದ್ದ. ಅಜ್ಜರು ಅದಕ್ಕೆ ಮನಸ್ಸು ಮಾಡಲಿಲ್ಲ. ಒಂದಲ್ಲ ಒಂದು ದಿನ ಸಿರಿಗೆ ಬುದ್ಧಿ ಕಲಿಸಬೇಕೆಂದು ಮನಸ್ಸಿನಲ್ಲಿ ಎಣಿಸಿಕೊಂಡಿದ್ದ. ಈ ಸಂಗತಿಯನ್ನು ಕಾಂತಣನೂ ತಿಳಿದಿದ್ದ.

ಸತ್ಯನಾಪುರದ ಅರಮನೆಯಲ್ಲಿ ಅಜ್ಜರು ಕಾಲವಾಗಿದ್ದಾರೆ. ಸಿರಿ ಈಗ ದಾತಾರರಿಲ್ಲದ ಹೆಣ್ಣು.

ಅವಳ ಅಹಂಕಾರಕ್ಕೆ ತಕ್ಕ ಮದ್ದು ಅರೆಯಲು ತಕ್ಕ ಕಾಲವೆಂದು ಕಾಂತಣ ಭಾವಿಸಿದ. ಸಂಕರ ಅಳ್ವನಿಗೆ ಓಲೆ ಬರೆದು ಜನ ಕಳುಹಿಸಿದ. "ಸತ್ಯನಾಪುರದಲ್ಲಿ ಅಜ್ಜರ ಜೀವಕ್ಕೆ ಸಂಚಕಾರ ಬಂದಿದೆ. ಬೂದಿ ಮಾಡಲು ನಾನು ಹೋಗುವುದಿಲ್ಲ. ನೀವು ಈ ಕೂಡಲೆ ಹೋಗಿ ಅಜ್ಜರ ಅಂತ್ಯ ಸಂಸ್ಕಾರ ನಡೆಸಿರಿ. ಅಳಿಯನ ಹಕ್ಕು ಮತ್ತು ಅಧಿಕಾರ ಪಡೆಯಲು ತಕ್ಕ ಕಾಲ" ಎಂದು ಓಲೆ ಬರೆಯಿಸಿದ.

ಸಂಕರ ಅಳ್ವ ಅಜ್ಜರ ಆಸ್ತಿಯ ಮೇಲೆ ಕಣ್ಣು ಇರಿಸಿ ಓಡೋಡಿ ಬಂದ. ಕಣ್ಣೀರು ಸುರಿಸುವ ನಾಟಕ ಮಾಡಿದ. ನಾಲ್ಕು ಜನ ಕೇಳುವಂತೆ ಅಜ್ಜರ ಗುಣಗಾನ ಮಾಡಿದ. ಸಿರಿಗೆ ಸಮಾಧಾನ ಹೇಳಿದ. ಅಜ್ಜರ ಪಟ್ಟದ ಅಧಿಕಾರ ತನಗೆ ಸಲ್ಲಬೇಕೆಂದು ಹೇಳಿದ. ಅಜ್ಜರ ಕೊನೆಯ ಕೆಲಸವನ್ನು ಅದ್ದೂರಿಯಿಂದ ನಡೆಸುವುದಾಗಿ ಹೇಳಿದ. ಇದನ್ನು ಕೇಳಿದ ಸಿರಿಗೆ ಕೋಪ ಏರಿತು. ಕಣ್ಣಲ್ಲಿ ಕಿಡಿ ಹಾರಿತು. "ಈ ಸತ್ಯನಾಪುರದ ಹಕ್ಕು ಅಜ್ಜರ ಹೆಣ್ಣು ಮಗಳಾದ ನನಗೆ ಸೇರಿದ್ದು. ಇಲ್ಲಿನ ಅಧಿಕಾರ ನನ್ನದು. ಸೂಡದ ಬೀಡಿನವರಿಗೆ ಇಲ್ಲಿ ಅಧಿಕಾರ ನೀಡಿದವರು ಯಾರು? ಅಜ್ಜರ ಹೆಣವನ್ನು ಮುಟ್ಟಲು ಯಾರಿಗೂ ಬಿಡಲಾರೆ" ಎಂದು ಗದರಿಸಿ ಮಾತನಾಡಿದಳು. ಸಂಕರ ಅಳ್ವ ಕೋಪದಿಂದ ನಡುಗಿದ. ಸಿರಿಗೆ ಬುದ್ಧಿ ಕಲಿಸುವುದಾಗಿ ಹೇಳಿ ನಡೆದ.

ಸಿರಿ ಸತ್ಯನಾಪುರದ ಅರಮನೆಯ ಬಾಕೆತ್ತಿಮಾರಿನಲ್ಲಿ ಗಂಧದ ಕಟ್ಟಿಗೆಯ ಕಾಷ್ಠ ಸಿದ್ಧಪಡಿಸಿದಳು. ಅಜ್ಜರ ಹೆಣವನ್ನು ತೀರ್ಥದಲ್ಲಿ ಮೀಯಿಸಿದಳು. ಹೊಸ ಬಟ್ಟೆಯ ಮುಸುಕು ಹಾಕಿದಳು. ಸಿರಿಯೂ ಚಾಕರಿಯ ಹೆಣ್ಣು ದಾರುವೂ ಚಟ್ಟಕ್ಕೆ ಹೆಗಲು ಕೊಟ್ಟರು. ಮಸಣಕ್ಕೆ ಬಂದರು. ಕಾಷ್ಠಕ್ಕೆ ಮೂರು ಪ್ರದಕ್ಷಿಣೆ ಬಂದರು. ಹೆಣವನ್ನು ಕಾಷ್ಠದ ಮೇಲೆ ಇರಿಸಿದರು. "ಕಾಯ ಬಿಟ್ಟು ಅಜ್ಜರೆ, ಕೈಲಾಸಕ್ಕೆ ಸಂದಿರಿ" ಎಂದು ಹೇಳಿ ಸಿರಿಯೇ ಕಾಷ್ಠಕ್ಕೆ ಬೆಂಕಿ ಕೊಟ್ಟಳು. ಅಜ್ಜರು ಭೂಮಿಗೆ ಎರಗಿದರು, ಅಗಸಕ್ಕೆ ಹೊಗೆಯಾಗಿ ಹೋದರು. ಬೆಂಕಿಯಲ್ಲಿ ಸುಟ್ಟು ಮುಕ್ಕಾಲು ಮೂರು ಗಳಿಗೆಯಲ್ಲಿ ಅಜ್ಜರು ಸುಟ್ಟು ಬೂದಿಯಾದರು. ಸತ್ತ ಐದನೆ ದಿನಕ್ಕೆ 'ಬೂದಿ ಒಪ್ಪ' ಮಾಡಿದಳು. ಹದಿಮೂರನೆ ದಿನದಂದು ಅಜ್ಜರಿಗೆ ಸಿರಿ ಬೊಜ್ಜ ಮಾಡಿದಳು.

ಸತ್ಯನಾಪುರಕ್ಕೆ ಹೋದ ಸಂಕರ ಅಳ್ವ ಸೀದಾ ಬಸ್ರೂರಿಗೆ ಬಂದ. ಸಿರಿ ಅಡಿದ ಮಾತನ್ನೆಲ್ಲಾ ಹೇಳಿದ. ಹೆಣ್ಣಿನ ಕೈ ಬಾಯಿಯ ಸೋಲಿಗೆ ಪ್ರತೀಕಾರ ಹೇಗೆ ಎಂದು ಕೇಳಿದ. ಕಾಂತಣ "ಸತ್ಯನಾಪುರದ ಅರಮನೆಯ ಪಟ್ಟದ ಅಧಿಕಾರವನ್ನು ಆಕೆಯಿಂದ ತಪ್ಪಿಸಬೇಕು. ಕೂಟದ ಕಳಕ್ಕೆ ಕರೆಸಬೇಕು. ಪಟ್ಟದ

ಅಧಿಕಾರವನ್ನು ಅಳಿಯ ಸಂಕರ ಅಳ್ವನಿಗೆ ಸಿಗಬೇಕು. ಕಳದಲ್ಲಿ ತೀರ್ಮಾನ ಮಾಡಬೇಕು. ಹೀಗೆ ಮಾಡಿ ಆಕೆಯ ಸೊಕ್ಕಿನ ರೆಕ್ಕೆಯನ್ನು ಕಡಿಸಬೇಕು" ಎಂದು ಹೇಳಿದ.

ಸಂಕರ ಅಳ್ವನಿಗೆ ಕಾಂತಣ ಹೇಳಿದುದನ್ನು ಕೇಳಿ ಸಂತಸ ಆಯಿತು. ಹಾಲು ಕುಡಿದಂತಾಯಿತು. ಸೂಡದ ಬೀಡಿಗೆ ಬಂದನು. ಓಲೆಯ ಆಳಿನಲ್ಲಿ ಸಿರಿಗೆ ಓಲೆ ಕಳುಹಿಸಿದ. ಉಟ್ಟ ಬಟ್ಟೆಯಲ್ಲೇ ಕೂಟದ ಕಳಕ್ಕೆ ಬಂದು ತಲಪಬೇಕೆಂದು ತಾಕೀತು ಮಾಡಿದ. ಅಂತರಂಗದ ಓಲೆ ಬಹಿರಂಗದ ಮಾನ ಬಂದುದನ್ನು ಕಂಡು ಸಿರಿ ದುಃಖಿಸಿದಳು. ಅಜ್ಜರು ಕಾಲವಾಗಿ ಆರು ಮೂರು ದಿನವಾಗಲಿಲ್ಲ. ದಿಕ್ಕು ದಾತಾರರು ಇಲ್ಲದ ಹೆಣ್ಣು ಸಾವಿರಾಳು ಸೇರಿದ ಕೂಟಕ್ಕೆ ಹೋಗಬೇಕಲ್ಲ ಎಂದು ಕಡೆಕಣ್ಣಲ್ಲಿ ಕೊಡಿ ದುಃಖಬಿಟ್ಟಳು. ಬಾಲ ಕುಮಾರ ಮಲಗಿದ ಬಂಗಾರದ ತೊಟ್ಟಿಲನ್ನು ತೂಗುತ್ತಾ ಜೋಗುಳ ಹಾಕುತ್ತಾ ಮಗುವನ್ನು ಮಲಗಿಸಿಕೊಂಡಿರು ಎಂದು ದಾರುವಿಗೆ ಹೇಳಿದಳು. ಸಿರಿ ಒಲೆ ಕೊಡೆ ಹಿಡಿದಳು. ರಾವನ್ನ ಗೆಜ್ಜೆಕತ್ತಿಯನ್ನು ಕೈಯಲ್ಲಿ ಹಿಡಿದು ಇಳಿದಳು. ಕೂಟದ ಕಳಕ್ಕೆ ಬಂದು ತಲುಪಿದಳು.

ಸತ್ಯನಾಪುರದ ಪಾಲು ತನಗೆ ಸಲ್ಲಬೇಕೆಂದು ಸಂಕರಅಳ್ವ ಕೂಟದ ಕಳದ ಪಾಲವರಿಗೆ ಅರಿಕೆ ಮಾಡಿಕೊಂಡನು. ಸಂಕರ ಅಳ್ವ ಕಳದ ಮಂದೆಗೆ ಹಿಡಿ ಹಿಡಿದ ದುಡ್ಡನ್ನು ಲಂಚದ ರೂಪದಲ್ಲಿ ನೀಡಿದ್ದ. ಹೀಗಾಗಿ ಎಲ್ಲರೂ ಸೇರಿ ಸಿರಿಗೆ ದೋಷ ಹೇಳಿದರು, ದೂಷಣೆ ಮಾಡಿದರು. "ಗಂಡಸರು ಗಡಿ ಹಿಡಿದು ಆಳಿಕೊಂಡು ಬಂದ ಪಟ್ಟದಲ್ಲಿ ಹೆಂಗಸರಿಗೆ ಹಕ್ಕು ಇಲ್ಲ" ಎಂದು ಪತ್ತೇರಿ ಕೂಟದಲ್ಲಿ ತೀರ್ಮಾನವಾಯಿತು. ಹೆಣ್ಣಿಗೆ ಅಧಿಕಾರ ನೀಡಿದಲ್ಲಿ ಹೆಣ್ಣಾಳಿಕೆ ನಡೆದು ಹೋದೀತೆಂದು ಕೂಟದವರು ಎಚ್ಚರಿಕೆ ನೀಡಿದರು. ಇದನ್ನು ಕೇಳಿದ ಸಿರಿ ಕೆಂಡವಾದಳು. "ನನ್ನ ಅಜ್ಜರ ಅರಮನೆಯ ಪಟ್ಟ ನನಗಲ್ಲದೆ ಹೊರಗಿನವರಿಗೆ ನಾನು ಬಿಟ್ಟುಕೊಡಲಾರೆ" ಎಂದು ಮೂರು ಮಾತು ಅಂದಳು. ಕೂಟದ ಕಳದಲ್ಲಿ ಸಿರಿಗೆ ಅವಮಾನವಾಯಿತು. "ನೀವು ಪತ್ತೇರಿ ಕೂಟದವರು ಮಾಡಿದ ಕಟ್ಟು ನನಗಲ್ಲ" ಎಂದು ಹೇಳುತ್ತ ಕಳದ ಕಟ್ಟೆ ಇಳಿದು ಬಂದಳು.

ಸತ್ಯನಾಪುರದ ಅರಮನೆಗೆ ಬಂದ ಸಿರಿ ಚಾಕರಿಯ ಹೆಣ್ಣು ದಾರುವನ್ನು ಕರೆದಳು. "ನನ್ನ ಮಗ ಕುಮಾರನ ಕುಂದಣದ ತೊಟ್ಟಿಲನ್ನು ಬಿಚ್ಚು ದಾರು. ನಮಗಿನ್ನು ಇಲ್ಲಿ ದಿಕ್ಕು ದಿಸೆ ಇಲ್ಲ. ದೇಶಾಂತರ ಹೋಗೋಣ" ಎಂದಳು. ದಾರು ತೊಟ್ಟಿಲು ಬಿಚ್ಚಿ ಅರಮನೆಯ ಅಂಗಳದಲ್ಲಿಟ್ಟಳು.

ಅರಮನೆಯ ಚಾವಡಿಯ ನಡೆಯಲ್ಲಿ ನಿಂತಳು. "ಸತ್ಯನಾಪುರದ ಮಣ್ಣು ಬಂಜರು ಬೀಳಲಿ. ಅರಮನೆ ಸುಟ್ಟು ಸೀಕರಿಯಾಗಲಿ" ಎಂದು ಮಣ್ಣು ಮುಟ್ಟಿ ಹೆಣ್ಣು ಶಾಪವಿತ್ತಳು. ದಾರುವನ್ನು ಕರೆದು "ನನ್ನ ಮಗ ಸತ್ಯದ ಕುಮಾರನ ಬಂಗಾರದ ಕುಂದಣದ ತೊಟಿಲನ್ನು ತಲೆ ಮೇಲೆ ಹೊರು ದಾರು. ನನ್ನ ಅರುವತ್ತು ಮೊಳದ ಪಟ್ಟೆ ಸೀರೆಯನ್ನು ಇರಿಕೆ ಸುತ್ತಿ ತಲೆಯ ಮೇಲೆ ಇರಿಸಿಕೊಂಡು ತೊಟ್ಟಿಲನ್ನು ಹೊತ್ತುಕೊಂಡು ಮುಂದೆ ನಡೆ. ಹಿಂದೆ ತಿರುಗಿ ನೋಡಬೇಡ. ಕಂಡದ್ದನ್ನು ಕಂಡೆನೆಂದು ಹೇಳಬೇಡ. ಕೇಳಿದನ್ನು ಕೇಳಿದೆ ಎಂದು ಅನ್ನಬೇಡ" ಎಂದು ಸಿರಿ ಹೇಳಿದಳು. ಮುಂದೆ ದಾರು, ಹಿಂದೆ ಸಿರಿ ಅರಮನೆ ಇಳಿದು ಹೋಗುವಾಗ ಅಜ್ಜರ ಅರಮನೆ ಸುಟ್ಟು ಸೀಕರಿ ಆಗಿ ಹೋಯಿತು.

ಮೂರು ಹಜ್ಜೆ ಮುಂದಿರಿಸಿದ ದಾರು ಹಿಂದೆ ತಿರುಗಿ ನೋಡಿದಳು. "ಅಕ್ಕಾ, ಅಕ್ಕಾ ನಮ್ಮ ಸತ್ಯನಾಪುರದ ಅರಮನೆ ಹೊತ್ತಿ ಸುಡು ಸೀಕರಿ ಆಗಿ ಹೋಗುತ್ತಿದೆ" ಎಂದಳು. ಇದನ್ನು ಕೇಳಿದ ಸಿರಿ "ಏನು ಹೆಣ್ಣೇ, ದಾರು ಕಂಡುದನ್ನು ಕಂಡೆನೆಂದು ಹೇಳಬೇಡ, ಕೇಳಿದುದನ್ನು ಕೇಳಿದೆ ಎಂದು ಹೇಳಬೇಡ ಎಂದು ಹೇಳಿದುದನ್ನು ಮರೆತೆಯಾ? ನಡೆ ನಡೆ" ಎಂದು ಹೇಳಿದಳು. ದಾರು ತೊಟ್ಟಿಲು ಹೊತ್ತುಕೊಂಡು ಮುಂದೆ ನಡೆದಳು. ಬಗ ಬಗ ಎಂದು ಹೊತ್ತಿ ಉರಿಯುತ್ತಿರುವ ಅರಮನೆಯನ್ನು ಕಂಡು "ನನ್ನ ಮಗ, ಸತ್ಯದ ಬಾಲಕ ಕುಮಾರನಿಗೆ ತೊಟ್ಟಿಲು ಕಟ್ಟಿದ ಬಂಗಾರದ ಕೋಣೆ ಒಂದು ಮಾತ್ರ ಸುಟ್ಟು ಹೋಗದಿರಲಿ. ಬಾಕಿ ಎಲ್ಲಾ ಕೋಣೆಗಳು ಉರಿದು ಹೋಗಲಿ" ಎಂದು ಸಿರಿ ಉಗ್ರಶಾಪವಿತ್ತಳು.

ಸಿರಿ ನಡೆಯುತ್ತಾ ಹೋದಾಗ ಪದಂಗಡಿಪೇಟೆ ಸಿಕ್ಕಿತು. ಸೂಳೆ ಸಿದ್ದು ಸಿರಿಯನ್ನು ಕಂಡವಳೇ ಓಡಿಕೊಂಡು ಬಂದು ದಾರಿಗೆ ಅಡ್ಡ ನಿಂತಳು. ತನ್ನ ಮನೆಗೆ ಸಿರಿಯನ್ನು ಕರೆದಳು. ಮಗುವಿಗೆ ಒಂದು ಹನಿ ಹಾಲು ಕುಡಿಸಿ ಮುಂದೆ ಹೋಗುವಂತೆ ಒತ್ತಾಯಿಸಿದಳು. ತುಟಿಯಂಚಿನಲ್ಲಿ ಪ್ರೀತಿ ತೋರಿದಳು. ಸಿರಿ ಸಿದ್ದುವಿನ ಮನೆ ಹೊಕ್ಕಾಗ ಅಲ್ಲಿ ಕಾಂತಣ ಪೂಂಜ ತೂಗುಯ್ಯಾಲೆಯಲ್ಲಿ ಕುಳಿತು ಕಿರು ಬೆರಳು ಕಚ್ಚುತ್ತಾ ಮುಗುಳುನಗೆ ನಗುತ್ತಿದ್ದ. ಸಿದ್ದು ಬೆಳ್ಳಿಯ ಸಿರಿಗಿಂಡೆಯಲ್ಲಿ ಕಪಿಲೆ ದನದ ಹಾಲು ಎರೆದಳು. ಅದಕ್ಕೆ ಸಂಕಪಾಷಾಣ ಹಾಕಿ ಹಸುಳೆ ಕುಮಾರಗೆ ನೀಡಿದಳು. ಹಾಲು ಕುಡಿದ ಮಗು ವಿಷವನ್ನು ತನ್ನ ಬಲ ಅಳ್ಳೆಯಲ್ಲಿ ಇರಿಸಿಕೊಂಡ, ಹಾಲನ್ನು ಕಡೆಬಾಯಿಯಿಂದ ಹೊರಸೂಸಿದ. ತನ್ನ ಮಗ, ಸತ್ಯದ ಕುಮಾರ ಆಗಿದ್ದಲ್ಲಿ ಹಾಲನ್ನು ಕುಡಿಯಲಾರ ಎಂದು ಸಿರಿ ನುಡಿದಳು. ಮುಖ ಅಡಿ ಹಾಕಿದ ಸಿದ್ದು ಸಿರಿಯ ಕಾಲಿಗೆ ಬಿದ್ದು ಒಂದು ವರ ನೀಡುವಂತೆ ಬೇಡಿಕೊಂಡಳು. "ನಿನ್ನ ಸೊಂಟದ ಮೇಲೆ ನನ್ನ

ಅಂದಚಂದ ಇರಲಿ. ಸೊಂಟದ ಕೆಳಗೆ ಬಾವು ಬಗಂದರ ಮೇಹರೋಗ ಬರಲಿ" ಎಂದು ಕೊಡದಿರುವ ವರ (ಶಾಪ) ನೀಡಿದಳು. ಹೀಗೆ ಮುಂದುವರಿಯುತ್ತಾ ಹಾದಿ ಬೀದಿಯಲ್ಲಿ ಎದುರು ಸಿಕ್ಕಿದ ಹೆಣ್ಣು ಬಳಗಕ್ಕೆ ಒಳ್ಳೆಯ ವರ ಕೊಡುತ್ತಾ ಮುಂದೆ ಹೋದಳು.

ಬಂದು ಬಂದು ಬಸರೂರ ಸೆಟ್ಟಿಕೇರಿ ಅರಮನೆಯ ಕಂಬುಳದ ಗದ್ದೆಯ ಏರಿಯಲ್ಲಿ ಬಂದರು. ಸಂಕರು ಪೂಂಜೆದಿ ದೂರದಿಂದಲೇ ನೋಡಿದಳು. ಸಿರಿಯ ತೊಟ್ಟಿಲ ಮಗು ಬರುತ್ತದೆಂದು ಸಂತಸದಲ್ಲಿ ಹಿರಿ ಹಿಗ್ಗಿದಳು. ಸಿರಿಯೂ ತೊಟ್ಟಿಲ ಮಗುವನ್ನು ಹೊತ್ತ ದಾರುವೂ ಬತ್ತಕೇರಿ ಅರಮನೆಯ ನಡುವಂಗಳಕ್ಕೆ ಬಂದರು. ನಡು ಮಧ್ಯಾಹ್ನದ ಹೊತ್ತು ಸೂಳೆ ಸಿದ್ದುವಿನ ಮನೆಯಿಂದ ಬಂದ ಕಾಂತಣ ಪೂಂಜ ಕುರುಬಾಗಿಲಿಂದ ಮನೆಯೊಳಗೆ ಹೊಕ್ಕನು. ತೂಗುಯ್ಯಾಲೆಯಲ್ಲಿ ಕುಳಿತು ಮುಗುಳ್ನಗುನಕ್ಕನು. ಅತ್ತೆ ಸಂಕರು ಪೂಂಜೆದಿ ಬಂಗಾರದ ಹರಿವಾಣದಲ್ಲಿ ಹಳದಿ ಕುರಿನೀರು ಮಾಡಿ ಮಗು ಕುಮಾರನಿಗೆ ನಿವಾಳಿಸಲೆಂದು ತಂದಳು. ಸಿರಿ ಅತ್ತೆಯವರನ್ನು ಅಡ್ಡ ತಡೆದಳು. ನನ್ನ ಗಂಡ ಎಲ್ಲಿದ್ದಾರೆಂದು ಕೇಳಿದಳು. "ಸೂಡಕ್ಕೆ ಸಾವಿರಾಳ ಕೂಟಕ್ಕೆ ಹೋಗಿದ್ದಾನೆ, ಸೂಡಕ್ಕೆ ಹೋದವನು ಈಗ ನಿಮಿಷಗಳಿಗೆಯೊಳಗಾಗಿ ಬರುತ್ತಾನೆ. ಮನೆಯೊಳಗೆ ಬಾ. ಸತ್ಯದ ಕುಮಾರನ ಬಂಗಾರದ ತೊಟ್ಟಿಲನ್ನು ನಮ್ಮ ಅರಮನೆಯಲ್ಲಿ ಕಟ್ಟು,, ಸಿರಿಯೆ" ಎಂದು ನುಡಿದಳು. "ಅತ್ತೆಯವರೆ, ಹಿರಿಯವರಾಗಿ ಸುಳ್ಳು ತಟಪಟ ಹೇಳಬೇಡಿ. ನಿಮ್ಮ ಮಗ, ನನ್ನ ಕೈ ಹಿಡಿದ ಗಂಡ ಸೂಳೆ ಸಿದ್ದುವಿನ ಮನೆ ಇಳಿದು ನಮ್ಮ ಅರಮನೆಯ ಕುರುಬಾಗಿಲಲ್ಲಿ ಹೊಕ್ಕು ಕೈ ಉಗುರು ಚಿವುಟುತ್ತಾ ಮಗುಳ್ನಗುತ್ತಿರುವುದು ಅದು ಯಾರು ಅತ್ತೆಯವರೆ ?" ಎಂದು ದಿಟ್ಟವಾಗಿ ಪ್ರಶ್ನಿಸಿದಳು. ಇದನ್ನು ಕೇಳಿದ ಕಾಂತಣ ತೂಗುಯ್ಯಾಲೆಯಿಂದ ಎದ್ದು ಬಂದ. ಮನೆಯ ಮೇಲುದಾರ ವಂದಕ್ಕೆ ಕೈಕೊಟ್ಟು ಹೊಸ್ತಿಲಿಗೆ ಕಾಲುಕೊಟ್ಟು ನಿಂತನು. ಕಣ್ಣಿನಲ್ಲಿ ಕೋಪದ ಕಿಡಿ ಹಾರುತ್ತಿತ್ತು. ಬಾಯಿಯಿಂದ ಬಯ್ಗುಳ ಮಾತು ಉದುರುತ್ತಿದ್ದುವು. ಸಿರಿಯ ಬಗ್ಗೆ ಬಲುಬಗೆಯ ದೋಷಾರೋಷಣೆ ಮಾಡಿದ. ತವರು ಮಾರಿದ ಹೆಣ್ಣು ಎಂದು ಹಂಗಿಸಿದ. ಅಂತಹ ಹೆಣ್ಣು ತನ್ನ ಅರಮನೆಯೊಳಗೆ ಬರಬಾರದೆಂದು ಹೇಳಿದ. "ನಾನು ನಿನ್ನ ತವರಿಗೆ ಬಾಣಂತಿ ಸಾಕಿದ ಬಗ್ಗೆ ಹಣ ನೀಡಿಲ್ಲ. ತೊಟ್ಟಿಲ ಮಗುವನ್ನು ಬರ ಹೇಳಿಲ್ಲ. ಏಕೆ ಬಂದೆ ? ಮನೆ ಹೊಕ್ಕರೆ ನಮ್ಮ ಬೆರ್ಮರ ಆಣೆ ಇದೆ" ಎಂದು ಗುಡುಗಿದ.

ಇದನ್ನು ಕೇಳಿದ ಸಿರಿ ಉರಿದು ಉರಿಜ್ವಾಳೆಯಾದಳು. "ನಿಮ್ಮ ಅರಮನೆಯಲ್ಲಿ ಮುಕ್ಕಾಲು

ಮೂರುಗಳಿಗೆ ನಿಲ್ಲಲಾರೆ. ನಿಮ್ಮ ಆಸ್ತಿ ಮನೆಗಾಗಿ ಬಂದವಳು ನಾನಲ್ಲ. ನಿಮ್ಮ ಸಂಪತ್ತೆಲ್ಲವೂ ಪದಂಗಡಿಯ ಸೂಳೆ ಸಿದ್ದುವಿಗೆ ಆಗಲಿ. ನಿಮಗೆ ವಿಚ್ಛೇದನ ಹೇಳಲು ಬಂದೆ" ಎಂದಳು.

ಸಿರಿ ಉಗ್ರ ರೂಪ ತಾಳಿದಳು. ಬಲಕ್ಕೆ ಎತ್ತಿನಿಂತಳು. ಎರಡೂ ಕೈಗಳನ್ನು ನೆಲಕ್ಕೆ ಹೊಡೆದು ಕೈಯ ಗಾಜಿನ ಬಳೆಗಳನ್ನು ಒಡೆದಳು. ಗಂಡ ಕಟ್ಟಿದ ಕರಿಮಣಿಯನ್ನು ಹರಿದು ಬಿಸಾಡಿದಳು. ಮೂಗಿನ ಮೂಗುತಿಯನ್ನು ಕೈಯಲ್ಲಿ ಹಿಡಿದು "ಇನ್ನು ಮುಂದಕ್ಕೆ ನೀತಿಬಿಟ್ಟು ಗಂಡನ ಜತೆ ಬಾಳುವ ಹೆಣ್ಣಿನ ಕಷ್ಟಕ್ಕೆ ಕೊನೆಯಾಗಬೇಕು. ಅಂತಹ ಹೆಣ್ಣಿಗೆ ಎರಡನೆ ಮದುವೆ ಆಗುವ ಕಟ್ಟು ಜಾರಿಗೆ ಬರಬೇಕು. ವಿಧವೆ ಆದ ಹೆಣ್ಣಿಗೆ ಮತ್ತೆ ಮುತ್ತೈದೆ ಆಗುವ ಭಾಗ್ಯ ಬರಬೇಕು" ಎಂದು ಹೇಳಿದಳು. ಇದನ್ನು ಕೇಳಿದ ಅತ್ತೆ ಸಂಕರು ಪೂಂಜೆದಿ ಬಂದು ಸೊಸೆ ಸಿರಿಯ ಬೆನ್ನು ಸವರಿ ಸಮಾಧಾನ ಹೇಳಿದಳು.

ಸಿರಿ ತನ್ನ ಗಂಡನ ಕಡೆ ನೋಡಿ ಹೇಳಿದಳು. "ನೀವೂ ನಾನೂ ಮುಂದೆ ಜೊತೆಯಾಗಿ ಬಾಳಬೇಕಾದರೆ ನೀವು ಕೊರಳಿಗೆ ನೇಗಿಲು, ಹೆಗಲಿಗೆ ನೊಗ ಕಟ್ಟಿಕೊಂಡು ನನ್ನ ಕಾಲಡಿಗೆ ಬರಬೇಕು. ಆಗ ನಾವು ಒಪ್ಪವಾಗಿ ಬಾಳಬಹುದು" ಎಂದು ಅಬ್ಬರಿಸಿ ನುಡಿದಳು. "ಬಸರೂರ ಅರಮನೆಯ ಹಾಲು ನೀರು ನಿನಗೆ ಮುಗಿಯಿತು. ಇನ್ನು ಮುಂದೆ ನೀನು ಈ ಅರಮನೆಯ ಮೆಟ್ಟುಕಲ್ಲು ಹತ್ತಕೂಡದು. ಮೆಟ್ಟು ಕಲ್ಲು ಇಳಿದು ನಿಂತ ನಿನಗೆ ನಾನು ವಿಚ್ಛೇದ ಹೇಳಿದ್ದೇನೆ" ಎಂದು ಕಾಂತಣ ಹೇಳಿದ.

ಸಿರಿಯೂ ದಾರುವೂ ಅರಮನೆ ಇಳಿದು ಮುಂದೆ ನಡೆದರು. ನಾಲ್ಕು ಊರು ದಾಟಿ ಮುಂದೆ ಸಾಗಿದರು. ಹೊತ್ತು ಇಳಿಯುತ್ತಾ ಬಂದಿತು. ದಾರಿ ನಡೆಯುತ್ತಾ ಮಾಬುಕಳ ಕಡವಿನ ಸಮೀಪ ಬಂದರು. ದೋಣಿಯ ಆಳನ್ನು ಕರೆದರು. "ನಮಗೆ ಹೊಳೆಯ ಆ ಬದಿಗೆ ಹೋಗಬೇಕು ಓಡ ಬಿಡು" ಎಂದು ಸಿರಿ ಕರೆದು ಹೇಳಿದಳು. "ಸಂಜೆಯ ಹೊತ್ತು, ದೋಣಿ ನಿಲುಗಡೆಯ ಹೊತ್ತು ಇದು" ಎಂದನು ಕಡವಿನ ಹುಡುಗ. "ಹಣಕ್ಕೆ ಕೊರತೆ ಮಾಡಲಾರೆ. ನನಗೆ ಆ ದಡಕ್ಕೆ ಹೋಗಲೇ ಬೇಕು. ದೋಣಿ ಬಿಡು" ಎಂದಳು ಸಿರಿ.

ದಾರು ತನ್ನ ತಲೆಯಲ್ಲಿ ಇದ್ದ ತೊಟ್ಟಿಲನ್ನು ಕೆಳಗಿಳಿಸಿದಳು. ಒಂದು ಬಾಳೆ ಎಲೆಯನ್ನು

ಕಡಿದುಕೊಂಡು ಬಂದಳು. ತೊಟ್ಟಿಲನ್ನು ಆ ಎಲೆಯ ಮೇಲೆ ಇರಿಸಿದಳು. ದಾರುವನ್ನು ಅದರ ಮೇಲೆ ಕುಳ್ಳಿರಲು ಹೇಳಿದಳು. ಬಾಳೆಯ ಎಲೆಯನ್ನು ನೀರಲ್ಲಿ ಹರಿಯಬಿಟ್ಟಳು. ಎರಡು ಕೈ ಜೋಡಿಸಿ ನಿಂತಳು. ಕುಲದೈವ ಬೆರ್ಮರನ್ನು ಸ್ತುತಿಸಿದಳು. "ನಾನು ಸತ್ಯದ ಮಗಳು ಹೌದಾದರೆ ಹೊಳೆಯ ಆ ಕಡೆಯ ನೀರು ಆ ಕಡೆಗಾಗಬೇಕು. ಈ ಕಡೆಯ ನೀರು ಈ ಕಡೆಗೆ ಆಗಬೇಕು. ನಾನು ಆ ದಡಕ್ಕೆ ನಡೆದುಕೊಂಡೇ ಹೋಗಬೇಕು ಎಂದು ಹೇಳಿದ್ದೇ ತಡ ಆ ಕಡೆಯ ನೀರು ಆ ಕಡೆಗಾಯಿತು. ಈ ದಡದ ನೀರು ಈ ಕಡೆಗಾಯಿತು. ನಡುವಲ್ಲಿ ಅಗಲವಾದ ಮಾರ್ಗ ಕಾಣಿಸಿಕೊಂಡಿತು. ಸಿರಿ ನಡೆದು ಆಚೆ ದಡ ಸೇರಿದಳು. ಕೊಡಿಬಾಳೆಯ ಮೇಲೆ ಇರಿಸಿದ ತೊಟ್ಟಿಲು ಹಾಗೂ ದಾರು ಆ ಕಡೆಗೆ ಸೇರಿದರು. ಮಾಬುಕಳ ಕಡವು ಹಿಂದಿನಂತಾಗಬೇಕೆಂದು ಸಿರಿ ಹೇಳಿದಳು. ಅಂತೆಯೇ ಆಯಿತು.

ಹೊತ್ತು ಕಂತುತ್ತಾ ಬಂದಿತು. ಬೇಗ ಬೇಗ ಹೆಜ್ಜೆ ಹಾಕುತ್ತಾ ಸಾಗಿದರು. ದೇಮೂಲ್ಯ ಕಟ್ಟೆಯಲ್ಲಿ ಸೇಮುಲ್ಲ ಕುಮಾರ ನಿತ್ಯದ ಪೂಜೆ ಮಾಡುತ್ತಿದ್ದನು. ಅವನಿಗೆ ಕಟ್ಟೆಯಲ್ಲಿ ಸೇಮೂಲ್ಯ



ಪಂಜುರ್ಲಿ ಆಗಿ ನಿಲ್ಲಲು ವರವಿತ್ತಳು. ಮುಂದೆ ಸಾಗಿ ಕಂಚಿ ಮಾದೇವಿಯ ಅರಮನೆಗೆ ಬಂದಳು. ಒಳಗೆ ಯಾರೆಂದು ಸಿರಿ ಕರೆದು ಕೇಳಿದಳು. "ಯಾರಮ್ಮ ಒಳಗೆ, ಬಾರೀ ದೂರದಿಂದ ನಡೆದು ಬಂದಿದ್ದೇವೆ. ಬಾಯಾರಿ ಬೆಂಡಾಗಿದ್ದೇವೆ. ಈ ರಾತ್ರಿಯ ಹೊತ್ತು ಕಳೆಯಲು ಜಾಗ ಕೊಡುವಿರಾ" ಎಂದು ಕೇಳಿದಳು.

"ನೀವು ಹೆಣ್ಣು ಹೆಂಗಸರು ಇಲ್ಲಿಗೆ ಏಕೆ ಬಂದಿರಿ ? ಇಲ್ಲಿ ನನ್ನ ಮಗ ವೀರಭದ್ರ ಕುಮಾರ ಇದ್ದಾನೆ. ಅವನು ಹೆಣ್ಣಿನ ಹುಚ್ಚ. ನಿಮಗೆ ತಂಗಲು ಹೇಗೆ ಜಾಗ ಕೊಡಲಿ?" ಎಂದಳು ಕಂಚಿಮಾದೇವಿ. "ನಿಮ್ಮ ಮಗನಿಗೆ ನೀವು ತಾಯಿ. ಬುದ್ಧಿ ಮಾತು ಹೇಳಿ ನಮಗೆ ಒಂದು ರಾತ್ರಿ ಕಳೆಯಲು ಜಾಗ ಕೊಡಿರಿ" ಎಂದು ಸಿರಿ ಬೇಡಿಕೊಂಡಳು. ನಡುರಾತ್ರಿಗೆ ವೀರಭದ್ರ ಮನೆಗೆ ಬಂದನು. ಮಲಗಿದ್ದ ಸಿರಿಯ ಬಳಿಗೆ ಬಂದನು. ಸಿರಿಗೆ ನಿದ್ರೆಯಿಂದ ಎಚ್ಚರಿಕೆ ಆಯಿತು. "ಹತ್ತಿರ ಬರಬೇಡ ದೂರ ನಿಲ್ಲು. ನನ್ನ ಸತ್ಯದ ಆಣೆ ಉಂಟು" ಎಂದು ಬೆದರಿಸಿ ನುಡಿದಳು. ಆತ ಈ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಮೈಗೆ ಕೈ ಹಾಕಲು ಬಂದನು. "ಕಲ್ಲಾಗಿ ಹೋಗು" ಎಂದು ಸಿರಿ ಶಾಪವಿತ್ತಳು. ವೀರಭದ್ರ ಕಲ್ಲಾಗಿ ಬಿದ್ದನು.

ಜಾವದ ಹೊತ್ತು. ಕೋಳಿ ಕೂಗುವ ಹೊತ್ತಿಗೆ ಸಿರಿಗೆ ಎಚ್ಚರಿಕೆ ಆಯಿತು. ಬೆಳ್ಳಿ ಮೂಡಿ ಬೆಳಗಾಯಿತು. ಸಿರಿ ಮಗು ಕುಮಾರನ ತೊಟ್ಟಿಲನ್ನು ದಾರುವಿನ ತಲೆ ಮೇಲೆ ಇರಿಸಿದಳು. ಅರಮನೆ ಇಳಿದು ದಾರಿ ಹಿಡಿದಳು. ನಾಲ್ಕು ಊರು ದಾಟಿದರು. ಲಂಕೆ ಲೋಕನಾಡಿಗೆ ಬಂದರು. ಅಜ್ಜರು ಕಟ್ಟಿಸಿದ ಬೆರ್ಮರ ಮೂಲಸ್ಥಾನದಲ್ಲಿ ಪೂಜೆ ಮುಗಿಸಿ ಮಾಣಿ ಹೊರಟು ನಿಂತಿದ್ದ. ಹರಕೆಯ ಪೂಜೆ ಮಾಡಿ ಪ್ರಸಾದ ನೀಡುವಂತೆ ಸಿರಿ ಕೇಳಿಕೊಂಡಳು. "ದಿನಕ್ಕೆ ಎರಡೇ ಪೂಜೆ. ಮಧ್ಯಾಹ್ನದ ಪೂಜೆ ಆಯಿತು. ಇನ್ನು ರಾತ್ರೆಯ ಪೂಜೆ. ಹರಕೆಯ ಪೂಜೆಯ ಕ್ರಮ ಈ ಊರಲ್ಲಿ ಇಲ್ಲ. ಪ್ರಸಾದವೂ ಇಲ್ಲ" ಎಂದು ಖಡಾಖಂಡಿತಾ ಹೇಳಿದ. ಸಿರಿ ಪ್ರಸಾದ ನೀಡುವಂತೆ ಮತ್ತೆ ಮತ್ತೆ ಅರಿಕೆ ಮಾಡಿಕೊಂಡಳು. ಮಾಣಿ ಬಾಗಿಲು ಮುಚ್ಚಿಕೊಂಡು ಸರ್ರನೆ ಹೋಯಿತು.

ಸಿರಿ ದಾರುವಿನ ತಲೆಯಿಂದ ಕುಮಾರನ ತೊಟ್ಟಿಲು ಇಳಿಸಿ ದೇವರ ಕೆರೆಗೆ ಹೋದಳು. ಮಿಂದು ಮಡಿ ಆದಳು. ಕಣ್ಣು ಮುಚ್ಚಿ ಬೆರ್ಮರನ್ನು ಧ್ಯಾನಿಸಿದಳು. "ನಾನು ಸತ್ಯದ ಮಗಳು ಹೌದೆಂದಾದರೆ ಹಾಕಿದ ಬಾಗಿಲು ತೆರೆಯಬೇಕು. ನಂದಿದ ನಂದಾದೀಪ ಬೆಳಗಬೇಕು. ಸರ್ವವಾದ್ಯ ಬೇಂಡ್



ಬಿಗಿಲ್‌ನಲ್ಲಿ ಬೆರ್ಮರಿಗೆ ಪೂಜೆ ಆಗಬೇಕು" ಎಂದು ಹೇಳಿದಳು.

ಸತ್ಯದ ನೆಲೆ ದೊಡ್ಡದು. ಮುಚ್ಚಿದ ಬಾಗಿಲು ತೆರೆಯಿತು. ತೂಗಿದಗಂಟೆ ಮೊಳಗಿತು. ನಂದಿದ ನಂದಾದೀಪ ಬೆಳಗಿತು. ದೇವರಿಗೆ ದೀಪಾರತಿ ಆಯಿತು. ಬಾಗಿಲು ಮುಚ್ಚಿ ಹೋಗಿದ್ದ ಪೂಜೆಯ ಮಾಣೆ ಓಡಿಕೊಂಡು ಬಂದಿತು. ಸಿರಿಯ ಕಾಲಿಗೆ ಬಿದ್ದು ತಪ್ಪಿಗೆ ಒಪ್ಪಿಗೆ ಕೇಳಿತು. ಸಿರಿಯೂ ದಾರುವೂ ಮುಂದೆ ಸಾಗಿದರು.

ಸಿರಿ ದಾರುವಿನೊಂದಿಗೆ ಹೋಗಿ ಹೋಗಿ ಅಬ್ಬನಡ್ಕ ಬೋಳದ ಪದವಿನ ಸಿರಿಗೋಳಿ ಮರದೆಡೆಗೆ ಬಂದಳು. ಇಬ್ಬರೂ ಉರಿಬಿಸಿಲಿಗೆ ಸೋತು ಬಸವಳಿದಿದ್ದರು. ಸಿರಿ ದಾರುವಲ್ಲಿ "ಹೆಣ್ಣೆ ದಾರು, ನಡು ಮಧ್ಯಾಹ್ನದ ಹೊತ್ತು ನಡೆಯಲು ಆಗುತ್ತಿಲ್ಲ. ಬಿಸಿಲು ತಗ್ಗಲಿ, ಮಧ್ಯಾಹ್ನ ತಿರುಗಲಿ, ಮಗು ಕುಮಾರನ ತೊಟ್ಟಿಲನ್ನು ಸಿರಿಗೋಳಿಯ ಮರದ ಮೂಡು ದಿಕ್ಕಿಗೆ ಹೋದ ಗೆಲ್ಲಿಗೆ ಕಟ್ಟಿಬಿಡು. ತೊಟ್ಟಿಲು

ತೂಗುತ್ತಾ ಮಗುವನ್ನು ಮಲಗಿಸು. ನಾನು ಮರದ ಬುಡದಲ್ಲಿ ಅಟ್ಟೆಹೊಯ್ದು ಕುಳಿತುಕೊಳ್ಳುವೆ" ಎಂದಳು. ಸಿರಿ ಮರದ ನೆರಳಲ್ಲಿ ಕುಳಿತು ನಾರಾಯಣ ಪದ ಹಾಡಿದಳು. ಸಿರಿಯ ಹಾಡಿನ ದನಿ ಬೋಳದ ಪದವು ಬೋಳದ ಮಲ್ಲಿಗೆಯಿಂದ ಬಂದು ಕೆಡ್ಡಸದ ಬೇಟೆ ಮಾಡಿಕೊಂಡಿದ್ದ ಅಣ್ಣ ಕರಿಯ ಕಾಸಿಂಗರಾಯ ತಮ್ಮ ಬೊಳಿಯ ದೇಸಿಂಗ ರಾಯರಿಗೆ ಕೇಳಿಸಿತು. ದಾರಿಯಲ್ಲಿ ಸಿರಿ ವೀಳೆಯದೆಲೆ ತಿಂದು ಉಗಿದಿದ್ದ ಉಚ್ಚಿಷ್ಟದ ಸೊಗಸು ನೋಡಿದರು. "ಅಯ್ಯಯ್ಯೋ ಇದು ಯಾರು ಉಗಿದ ಉಚ್ಚಿಷ್ಟವಪ್ಪ! ಈ ಉಚ್ಚಿಷ್ಟ ಇಷ್ಟು ಸೊಗಸಾಗಿರಬೇಕಾದರೆ ಇದನ್ನು ಉಗಿದ ಹೆಣ್ಣು ಎಷ್ಟು ಸೊಬಗಿಯಾಗಿರಳು?" ಎಂದು ಅಂದುಕೊಂಡರು. ಮೂರು ಹೆಜ್ಜೆ ಮುಂದೆ ಬಂದಾಗ ಗೋಳಿ ಮರದಡಿ ಸಿರಿ ಕುಳಿತಿದ್ದುದು ಕಾಣಿಸಿತು. ಹತ್ತಿರ ಹೋಗಿ ಸಿರಿಯ ಹುಟ್ಟಿನ ವಿವರ ಕೇಳಿದರು. ಸಿರಿ ತನ್ನ ಬದುಕಿನ ಕತೆಯನ್ನು ವಿವರವಾಗಿ ನಿರೂಪಿಸಿದಳು. ಅದನ್ನು ಕೇಳಿದ ಆ ಯುವಕರು "ನೀನು ನಮಗಿಂತ ಹಿಂದೆ ಹುಟ್ಟಿದೆಯಾದರೆ ಅಕ್ಕ ಎಂದು ತಿಳಿಯುತ್ತೇವೆ. ಮುಂದೆ ಹುಟ್ಟಿದೆಯಾದರೆ ನಮ್ಮ



ತಂಗಿ ಎಂದು ಭಾವಿಸುತ್ತೇವೆ. ನಮ್ಮ ಅರಮನೆಗೆ ಬಾ ತಾಯಿ. ನಿನಗೆ ತೊಡುವಷ್ಟು ಆಭರಣ ಉಂಟು. ಉಣ್ಣುವಷ್ಟು ಅನ್ನ ಉಂಟು. ಉಡುವಷ್ಟು ಪಟ್ಟೆ ಉಂಟು. ಪ್ರೀತಿಯಿಂದ ನಿನ್ನನ್ನು ನೋಡಿಕೊಳ್ಳುತ್ತೇವೆ" ಎಂದರು. ಸಿರಿ "ಬಂಗಾರದ ತೊಟ್ಟಿಲಲ್ಲಿ ಮಲಗಿರುವ ಸತ್ಯದ ಮಗ ಕುಮಾರನಲ್ಲಿ ಎರಡು ಮಾತನಾಡಿ ಬರುತ್ತೇನೆ" ಎಂದಳು. ನಲುವತ್ತೊಂದು ದಿನದ ಬಾಲಕನ ಬಳಿ ಬಂದು ಸಿರಿ "ಮಗಾ ಕುಮಾರ, ದಿಕ್ಕು ದೆಸೆ ಇಲ್ಲದ ನಮ್ಮನ್ನು ಬೋಳದ ಮಲ್ಲಿಗೆಯ ಕರಿಯ ಕಾಸಿಂಗರು, ಬೊಳೆಯ ದೇಸಿಂಗರು ಪ್ರೀತಿಯಿಂದ ಕರೆಯುತ್ತಿದ್ದಾರೆ. ನಮ್ಮನ್ನು ಸೌಭಾಗ್ಯದಿಂದ ನೋಡುತ್ತಾರಂತೆ. ನಾವು ಹೋಗೋಣವೇ ಮಗಾ" ಎಂದು ಕೇಳಿದಳು.

ತೊಟ್ಟಿಲಲ್ಲಿ ಓರೆ ಮಲಗಿದ್ದ ಮಗು ದಡಕ್ಕನೆ ಎದ್ದು ಅಟ್ಟೆಹೊಯ್ದು ಕುಳಿತಿತು. ಕುಳಿತ ಮಗು ತಾಯಿಗೆ ಉತ್ತರ ಕೊಟ್ಟಿತು. "ನೀವು ಹೋಗುವುದಾದರೆ ಹೋಗಿ ತಾಯಿ. ನಾನು ಬರಲಾರೆ. ನನ್ನನ್ನು ನೇಗಿಲು ಹಿಡಿಸಿ ಉಳಲು ಹೇಳಿಯಾರು. ಹಸುಗಳಿಗೆ ಹುಲ್ಲು ತಾ ಎಂದಾರು. ಕೋಣಗಳಿಗೆ ಅಕ್ಕಚ್ಚು ಎರೆಸಿಯಾರು. ತಂದೆಯಿಲ್ಲದ ಮಗ ಎಂದು ಕರೆದಾರು. ನಾನು ನಿಮ್ಮೊಂದಿಗೆ ಬರಲಾರೆ. ಒಬ್ಬ ತಂದೆಗೆ ಹುಟ್ಟಿ ಇನ್ನೊಬ್ಬನನ್ನು ತಂದೆಯೆಂದು ಕರೆಯಲಾರೆ. ನನ್ನನ್ನು ಮಾಯ ಮಾಡಿರಿ, ತಾಯಿಯವರೆ" ಎಂದನು. ಇದನ್ನು ಕೇಳಿದ ದಾರು "ಈ ತನಕ ನಾನು ಕುಮಾರನನ್ನು ನೋಡಿಕೊಂಡು ಇರುತ್ತಿದ್ದೆ. ಅವನ ಜತೆ ನನ್ನನ್ನೂ ಮಾಯ ಮಾಡಿರಿ, ತಾಯಿಯವರೇ" ಎಂದು ಸಿರಿಯಲ್ಲಿ ಬೇಡಿಕೊಂಡಳು. ಹಾಗೇನೇ ಸಿರಿ ಕುಮಾರನನ್ನೂ ದಾರುವನ್ನೂ ಮಾಯ ಮಾಡಿದಳು.

ಅಷ್ಟರಲ್ಲಿ ಸರ್ವವಾದ್ಯ ಬೇಂಡ್ ಬಿಗಿಲಿನೊಂದಿಗೆ ದಂಡಿಗೆ ತೆಗೆದುಕೊಂಡು ಕರಿಯ ಕಾಸಿಂಗ ಬೊಳಿಯ ದೇಸಿಂಗರು ಬಂದು ತಲಪಿದರು. ಸಿರಿ ದಂಡಿಗೆ ಏರಿದಳು. ಬೋಯಿಗಳು ದಂಡಿಗೆಗೆ ಹೆಗಲು ನೀಡಿದರು. ಮೆರವಣಿಗೆ ಬೋಳದ ಮಲ್ಲಿಗೆ ಕಡೆ ಹೊರಟಿತು. ಅರಮನೆ ತಲಪಿತು. ನಡು ಅಂಗಳದಲ್ಲಿ ದಂಡಿಗೆಯನ್ನು ಇಳಿಸಿದರು. ಸಿರಿಯನ್ನು ತಮ್ಮ ತಂಗಿ ಎಂದು ಭಾವಿಸಿ ದಂಡಿಗೆಯಿಂದ ಇಳಿಸಿ ಕರೆತಂದರು. ಅರಮನೆಯ ಏಳು ಮಾಳಿಗೆಯ ಮೇಲುಮಿಂಚಿನಲ್ಲಿ ತೂಗುಹಾಕಿದ್ದ ಉಯ್ಯಾಲೆಯಲ್ಲಿ ಕುಳ್ಳಿರಿಸಿದರು. ಕಪಿಲೆ ಹಸುವಿನ ತುಪ್ಪದ ನಂದಾದೀಪದಲ್ಲಿ ದೀಪ ಹೊತ್ತಿಸಿ ನಾರಾಯಣ ಪದ ಹಾಡಿಕೊಂಡು ಸಿರಿ ಇದ್ದಳು.

ಸಿರಿಯನ್ನು ಬೋಳದ ಅರಮನೆಯಲ್ಲಿ ಕರಿಯ ಕಾಸಿಂಗ, ಬಿಳಿಯ ದೇಸಿಂಗರು ತಂಗಿಯಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಪ್ರಾಯದ ಹೆಣ್ಣು ಸತ್ಯಮಾಲೋಕದ ಅಕ್ಕೆರಸು ಸಿರಿಗೆ ಎರಡನೆ ಮದುವೆ ಮಾಡಿಸಬೇಕೆಂದು ಆಲೋಚಿಸಿದರು. ಕೊಟ್ರಾಡಿಯ ಕೊಡ್ಸರಾಳ್ವನಿಗೆ ಬೋಂಟೆ ಬವರ ನಡೆಸಲು ಬರುವಂತೆ ಓಲೆ ಕಳುಹಿಸಿದರು. ಕೊಡ್ಸರಾಳ್ವರು ತನ್ನ ಹೆಂಡತಿ ಸಾಮು ಆಳ್ವದಿಯಲ್ಲಿ ಹೇಳಿ ಹೊರಟರು. "ಬೋಳದ ಅಣ್ಣ ತಮ್ಮಂದಿರು ನಿಮ್ಮನ್ನು ಮಂಕುಮರುಳು ಮಾಡಿಯಾರು. ನೀವು ಅಲ್ಲಿಗೆ ಹೋಗಬಾರದು" ಎಂದು ಹಟ ಹಿಡಿದಳು.

ಹೆಂಡತಿ ಸಾಮು ಆಳ್ವೆದಿ ಹೇಳಿದುದನ್ನು ಕೊಡ್ಸರಾಳ್ವರು ಕೇಳದಾದರು. ಅಲಂಕರಿಸಿಕೊಂಡು ಬೋಳದ ಮಲ್ಲಿಗೆಗೆ ತೆರಳಿದರು. ದೇಸಿಂಗ ಸಹೋದರರು ಬಾರೀ ಬಿರ್ದು ಸಮ್ಮಾನದಲ್ಲಿ ಆಳ್ವರನ್ನು ಎದುರುಗೊಂಡರು. ಜೊತೆಯಾಗಿ ಕುಳಿತು ಊರ ವರ್ತಮಾನ ಪರವೂರ ಸುದ್ದಿ ಮಾತನಾಡಿದರು. ಮಾತು ಸಿರಿಯ ಕಡೆ ತಿರುಗಿತು. ಸತ್ಯನಾಪುರದ ಅಜ್ಜರ ಮಗಳು, ಸತ್ಯಮಾಲೋಕದ ಸಿರಿ ಬಸರೂರ ಕಾಂತಣ್ಣಾಳ್ವನ ಹೆಂಡತಿಯನ್ನು ಮರು ಮದುವೆ ಆಗಬೇಕಂದು ಒತ್ತಾಯಿಸಿದರು. ಕೈಹಿಡಿದ ಹೆಂಡತಿಯ ಒಪ್ಪಿಗೆ ಇಲ್ಲದೆ ಮದುವೆಯಾಗೆನು ಎಂದು ಕೊಡ್ಸರಾಳ್ವರು ಹೇಳಿದರು. ಪಟ್ಟೆ ಸೀರೆಯ ಪರದೆಯ ಒಳಗಿನಿಂದ ಬೆಳ್ಳಿಯ ಸಿರಿಗಿಂಡೆಯಲ್ಲಿ ಹಾಲು ಹಿಡಿದುಕೊಂಡು ಸಿರಿ ಬಂದಳು. ಪರದೆಯ ಮರೆಯಿಂದ ಹಾಲು ತೆಗೆದುಕೊಳ್ಳುವಾಗ ಅವಳ ಕೈಯ ಉಗುರಿನ ಸೊಗಸು ನೋಡಿ ಕೊಡ್ಸರಾಳ್ವರು ಮರುಳಾದರು. ಸಿರಿಯನ್ನು ಮದುವೆ ಮಾಡಿಕೊಡಿರಿ ಎಂದು ದೇಸಿಂಗರಲ್ಲಿ ಕೇಳಿಕೊಂಡನು. ದೇಸಿಂಗರು ಆಗಬಹುದೆಂದು ಕೈಭಾಷೆ ನೀಡಿದರು. ಎರಡು ಕಳೆದು ಮೂರನೆ ದಿನ ಮರಳಿ ಬರುವುದಾಗಿ ಹೇಳಿ ಕೊಟ್ರಾಡಿಗೆ ಹೋದರು.

ಕೊಡ್ಸರಾಳ್ವರ ಮಡದಿ ಸಾಮುವಿಗೆ ಗಂಡನ ಕಪಟ ತಿಳಿಯಿತು. "ಸಿರಿಯನ್ನು ಮರೆಯಿರಿ. ಕೈ ಹಿಡಿದ ಹೆಂಡತಿಗೆ ಕಪಟ ಮಾಡಬೇಡಿರಿ" ಎಂದಳು. "ಸಿರಿಯ ರೂಪಕ್ಕೆ ನಾನು ಮರುಳಾಗಿದ್ದೇನೆ. ಮದುವೆ ಮಾಡಿಕೊಳ್ಳುವುದಾಗಿ ಕೈಭಾಷೆ ನೀಡಿದ್ದೇನೆ" ಎಂದು ಹೇಳಿದರು. ಕೊಡ್ಸರಾಳ್ವರು ಸಿರಿಯನ್ನು ಮದುವೆ ಮಾಡಿಕೊಂಡರೆ ತಾನು ತನ್ನ ತವರು ಮನೆ ಉಜಮಾರ ಗುತ್ತಿಗೆ ಮರಳುವುದಾಗಿ ಹಟ ಹಿಡಿದಳು. ಕೊಡ್ಸರಾಳ್ವರಿಗೆ ಸಿಟ್ಟು ನೆತ್ತಿಗೇರಿತು. ಕೈ ನೋಯುವಷ್ಟು ಹೆಂಡತಿಗೆ ಹೊಡೆದ, ಕಾಲು

ಸೊರಗುವಷ್ಟು ತುಳಿದರು.

ಕೊಡ್ಸರಾಳ್ವರು ಮರುದಿನ ಬೇಗ ಎದ್ದರು. ಊರ ಮಂದೆ ಸೇರಿಸಿದರು. ಒಕ್ಕಲುಸಕ್ಕೆಲು ಮಂದಿಯನ್ನು ಬರಮಾಡಿದರು. ಬೇಟೆಬವರ ನಡೆಸಲು ಹೋಗುವುದಾಗಿ ಹೇಳಿದರು. ಬೋಳದ ಮಲ್ಲಿಗೆಗೆ ಪ್ರಯಾಣ ಹೋದರು. ಬೋಳ ಮಲ್ಲಿಗೆಯಲ್ಲಿ ಸಿರಿಯ ಎರಡನೆ ಮದುವೆಗೆ ಎಲ್ಲ ಸನ್ನಾಹ ನಡೆದಿದೆ. ಅದ್ದೂರಿಯಲ್ಲಿ ಮದುವೆ ಕಳೆಯಿತು. ದೇಸಿಂಗರು ಹೆಣ್ಣೊಪ್ಪಿಸಿದರು. ಕೊಡ್ಸರಾಳ್ವರು ತನ್ನ ಗುತ್ತಿಗೆ ಮರು ಮದುವೆಯಾದ ಮದುಮಗಳನ್ನು ದಿಬ್ಬಣದಲ್ಲಿ ಕರೆತಂದರು.

ಕೈಹಿಡಿದ ಗಂಡ ಎರಡನೆ ಮದುವೆ ಮಾಡಿಸಿಕೊಂಡುದು ಇತ್ತ ಸಾಮುಗೆ ತಿಳಿಯಿತು. ಕಣ್ಣನೀರು ಧಾರಾಕಾರವಾಗಿ ಸುರಿಯಿತು. ಗಂಡನ ಕಪಟವನ್ನು ಎಣಿಸಿ ದುಃಖಿಸಿದಳು. ತೆಂಗಿನ ಕಾಯಿಯ ಕಡಿಯಲ್ಲಿ ಕಪಿಲೆ ಹಸುವಿನ ತುಪ್ಪದಲ್ಲಿ ದೀಪ ಹಚ್ಚಿಟ್ಟಳು. "ಈ ಅರಮನೆಗೆ ನಾನು ಬಂದ ಬಳಿಕ ಬಂದ ಹೆಣ್ಣಿನ ಕಣ್ಣಿಗೆ ಈ ಹೊತ್ತಿಸಿಟ್ಟ ದೀಪ ಸೂಜಿಯಾಗಿ ಚುಚ್ಚಬೇಕು. ಈ ಮನೆಗೆ ಬಡತನ ಹೆಚ್ಚುತ್ತಾ ಬರಬೇಕು" ಎಂದು ಶಾಪವಿತ್ತಳು. ಸಾಮು ಕೊಟ್ರಾಡಿ ಗುತ್ತು ಇಳಿದು ತನ್ನ ತವರು ಮನೆಗೆ ನಡೆದಳು.

ಕೊಡ್ಸರಾಳ್ವ ಬಿಡುದಾರೆಯ ಮಡದಿ ಸಿರಿಯನ್ನು ದಂಡಿಗೆಯಿಂದ ಇಳಿಸಿದರು. ಸತ್ಯನಾಪುರದ ಸತ್ಯದ ಮಗಳು ಸಿರಿಗೆ ಸಾಮು ಮಾಡಿದ ಹುನ್ನಾರವು ತಿಳಿಯಿತು.

ಸಿರಿ ಕೈಹಿಡಿದ ಗಂಡನನ್ನು ಕರೆದಳು. "ಈ ಅರಮನೆಗೆ ಮೊದಲು ಹೊಕ್ಕ ಹೆಣ್ಣು ಇಲ್ಲವಾದರೆ ನಾನು ಮೆಟ್ಟುಕಲ್ಲು ಹತ್ತಲಾರೆ. ಕಾಲು ಒಳಗೆ ಇರಿಸಲಾರೆ. ನಿಮ್ಮ ಕೈದಾರೆಯ ಹೆಂಡತಿ ಬರಬೇಕು. ನನ್ನನ್ನು ತಂಗಿ ಎಂದು ಕರೆಯಬೇಕು. ನಿಮ್ಮ ಹೆಂಡತಿ ಸಾಮು ನನ್ನ ಬಲಕೈ ಹಿಡಿದು ಈ ಅರಮನೆಯೊಳಗೆ ಕರೆದು ತರಬೇಕು. ಇಲ್ಲವಾದರೆ ನಾನು ಒಳಗೆ ಬರಲಾರೆ" ಎಂದು ಹೇಳಿದಳು. ಕೊಡ್ಸರಾಳ್ವನಿಗೆ ದಾರಿ ಕಾಣಲಿಲ್ಲ. ನಾಲ್ಕೂರ ಗುರಿಕಾರರನ್ನು ಸೇರಿಸಿಕೊಂಡು ಸಾಮುವಿನ ತವರು ಮನೆಗೆ ಹೋದ. ಸಾಮುವಲ್ಲಿ ಕ್ಷಮೆ ಬೇಡಿದ. "ಬಿಡುದಾರೆಯ ಹೆಣ್ಣು ಸಿರಿ ಅರಮನೆಗೆ ನೀನು ಬಾರದೆ ಒಳಗೆ ಬರುವುದಿಲ್ಲವಂತೆ. ಎಲ್ಲವನ್ನೂ ಮರೆತು ನನ್ನ ಮರ್ಯಾದೆ ಕಾಪಾಡಬೇಕು" ಎಂದು ಬೇಡಿಕೊಂಡ.

ಸಾಮು ಗಂಡನ ಕೋರಿಕೆಗೆ ಕರಗಿದಳು. ಕೈಹಿಡಿದ ಗಂಡನ ಜತೆ ಕೊಟ್ರಾಡಿ ಅರಮನೆಗೆ ಬಂದಳು. ಸಿರಿಯನ್ನು ತಂಗಿ ಎಂದು ಪ್ರೀತಿಯಿಂದ ಕರೆದಳು. ಸಾಮು ಸಿರಿಯ ಬಲಕ್ಕೈಹಿಡಿದುಕೊಂಡು ಬಲಕಾಲು ಮುಂದಿರಿಸಿಕೊಂಡು ಕೊಟ್ರಾಡಿಗುತ್ತಿನ ಮನೆಯನ್ನು ಹೊಗ್ಗಿಸಿದಳು. ಚಾವಡಿಯಲ್ಲಿದ್ದ ಉಲ್ಲಾಯ ಉಲ್ಲಾಲ್ತಿಯರಿಗೆ ಇಬ್ಬರೂ ಹೊಡಾಡಿದರು. ಹೊಟ್ಟೆ ತುಂಬ ಊಟವಾಯಿತು. ಸಿರಿಯೂ ಸಾಮುವೂ ಅನ್ಯೋನ್ಯವಾಗಿದ್ದರು.

ಸಿರಿ ಹೊಕ್ಕ ಬಳಿಕ ಕೊಟ್ರಾಡಿ ಗುತ್ತಿನಲ್ಲಿ ಸುಖ ಸಂಪತ್ತು ಉಕ್ಕಿ ಬಂದಿತು. ಕೊಡ್ಸರಾಳ್ವನ ಸಂಸಾರ ಹಾಲು ನೀರಿನಂತೆ ಇದ್ದಿತು. ದಿನ ಕಳೆಯಿತು. ವರ್ಷ ತಿರುಗಿತು. ಸಾಮುವಿನ ಹೊಟ್ಟೆಯಲ್ಲಿ ಮತ್ಸರದ ಕಿಡಿ ಅರಳತೊಡಗಿತು. ಕೈ ಹಿಡಿದ ಗಂಡನಿಗೆ ಸಿರಿಯ ಮೇಲೆ ತನಗಿಂತ ಹೆಚ್ಚು ಪ್ರೀತಿ ಎಂಬ ಅನುಮಾನ ಆಕೆಗೆ. ಒಂದು ದಿನ ಸಿರಿಗೆ ತಿಂಗಳ ಸೂತಕ ಕಾಣಿಸಿತು. ಮೂರು ದಿನ ಕಳೆದು ನಾಲ್ಕನೆಯ ದಿನ ಬೆಳಗ್ಗೆ ಬೇಗನೆ ಎದ್ದಳು. ಮಲಗಿದ ಚಾಪೆ ಮಡಚಿದಳು. ಶುದ್ಧಕ್ಕಾಗಿ ಸೆಗಣಿನೀರು ಹನಿಯಿಸಿದಳು. ಸಾಮುವನ್ನು ಕರೆದು "ಅಕ್ಕಾ ಅಕ್ಕಾ ನಾನು ಹರಿವ ನೀರಿನ ಬಳಿಗೆ ಹೋಗಿ ಶುದ್ಧ ಮುದ್ರಿಕೆ ಆಗಿ ಬರುತ್ತೇನೆ. ನನಗೆ ಸೀಗೆ ಬಾಗೆ ಒಡ್ಡಿ ಸರೋಳಿ, ಅರಸಿನ ಜೋಡಿಸಿ ಕೊಡಿರಿ" ಎಂದಳು. ಇದನ್ನು ಕೇಳಿದ ಸಾಮು ಕೋಪಿಸಿಕೊಂಡು ಚೀರಾಡಿದಳು. "ನಿನಗೆ ಬೇಕಾದ ವಸ್ತುಗಳನ್ನು ಜೋಡಿಸಿ ಕೊಡಲು ನೀನು ಬೋಳದ ಮಲ್ಲಿಗೆಯಿಂದ ಬರುವಾಗ ಎಷ್ಟು ಸಾವಿರ ವರಹದ ಸೊತ್ತು ತಂದಿದ್ದಿ ? ಸೀಗೆಯೂ ಇಲ್ಲ ಬಾಗೆಯೂ ಇಲ್ಲ" ಎಂದು ಚುಚ್ಚು ಮಾತನಾಡಿದಳು. ಸಿರಿ ಮಡಿವಾಲ್ದಿ ಚೆಲುವೆಯಲ್ಲಿ ಕೇಳಿ ಬೇಕಾದ ಸರಕುಗಳನ್ನು ಜೋಡಿಸಿಕೊಂಡಳು. ನೀರ ಹರಿವಿಗೆ ಹೋಗಿ ಮಿಂದು ಶುದ್ಧಮುದ್ರಿಕೆ ಆದಳು.

ಕೆಲವು ದಿನ ಕಳೆಯಿತು. ಅಕ್ಕ ಸಾಮು ಬೀಡಿಗೆ ದೂರ ನೀರೆ ಕಡವಿಗೆ ಸಮೀಪವಾದಳು. ತಿಂಗಳ ಸೂತಕ ಕಾಣಿಸಿತು. ನಾಲ್ಕನೆ ದಿನ ಬೆಳಗ್ಗೆ ಮೀಯಲು ಹೋಗುವ ಮುನ್ನ ತಂಗಿ ಸಿರಿಯಲ್ಲಿ ಸೀಗೆ, ಬಾಗೆ, ಅರಸಿನ ಕೊಂಬು ಕೇಳಿದಳು. ಸಾಮುವಿನ ನಾಲಗೆಯಿಂದ ಮಾತು ಹೊರಬೀಳುವ ಮೊದಲೇ ಸಿರಿ ಎಲ್ಲಾ ಸರಂಜಾಮುಗಳನ್ನು ಒದಗಿಸಿದಳು. ಸ್ನಾನದ ಕೆರೆಯೆಡೆಗೆ ಸಾಮು ಹೋದಳು. ತುಂಬಿ ಹರಿಯುತ್ತಿದ್ದ ಆ ಕೆರೆಯಲ್ಲಿ ಆ ದಿನ ಒಂದು ಬಿಂದು ಕೂಡಾ ನೀರು ಇರಲಿಲ್ಲ. ಗೆಂದ

ತಾಳೆಯ ಸೀಯಾಳ ತರಿಸಿದಳು. ಅದರೊಳಗೆ ಒಂದು ಬಿಂದು ನೀರು ಕೂಡಾ ಇರಲಿಲ್ಲ. ಸಾಮುಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ತನ್ನ ಅಣ್ಣ ಅಂಗರಿಜೆ ಬರ್ಕೆಯ ಉಜೆಮಾರ ಗುತ್ತು ಬಾಮು ಕಿಲ್ಲೆ ಅವರಿಗೆ ಓಲೆ ಕೊಟ್ಟು ಜನ ಕಳುಹಿಸಿದಳು. ತನ್ನ ಬೀಡಿಗೆ ತುರ್ತಾಗಿ ಬಂದು ಹೋಗುವಂತೆ ಬರೆದಳು. ಬಾಮು ಕಿಲ್ಲೆ ಬಂದು ತಲುಪಿದರು. ಹರಿವ ಕೆರೆಯಲ್ಲಿ ಒಂದು ಬಿಂದು ನೀರು ಕೂಡಾ ಇಲ್ಲದಂತೆ ಸಿರಿ ಮಾಡಿದ ತಂತ್ರವನ್ನು ವಿವರಿಸಿ ಹೇಳಿದಳು. ಬಾಮು ಕಿಲ್ಲೆ ಸಿರಿಯನ್ನು ಕರೆದು ಕೇಳಿದರು. ಹಿಂದೆ ಅಕ್ಕ ಸಾಮು ಮಾಡಿದ ಕಪಟ ನಾಟಕವನ್ನೆಲ್ಲ ಸಿರಿ ವಿವರಿಸಿ ಹೇಳಿದಳು. ಬಾಮು ಕಿಲ್ಲೆಯವರು ಇಬ್ಬರನ್ನೂ ಕರೆದು "ಇನ್ನು ಮುಂದಕ್ಕೆ ನಮ್ಮ ಬಡಗಣ ಲಂಕೆಲೋಕನಾಡ ಜಯವುಲ್ಲ ಬೆರ್ಮರು ನಿಮಗೆ ಅಕ್ಕ ತಂಗಿಯರಂತೆ ಇರಲು ಬುದ್ಧಿ ಕೊಡಲಿ. ನೀವು ಪ್ರೀತಿಯಿಂದ ಜೊತೆಯಾಗಿ ಇರಿ" ಎಂದು ಬುದ್ಧಿ ಮಾತು ಹೇಳಿದರು. ಸಿರಿ ಅಕ್ಕ ಸಾಮುವನ್ನು ಕರೆದು "ಅಕ್ಕಾ, ಶುದ್ಧ ಸ್ನಾನಕ್ಕಾಗಿ ಕೆರೆಗೆ ಹೋಗಿರಿ. ಕೆರೆಯಲ್ಲಿ ನೀರು ತುಂಬಿದೆ ನೋಡಿರಿ" ಎಂದಳು. ಸಾಮು ಹರಿವ ಕೆರೆಯೆಡೆಗೆ ಹೋದಳು. ಮಿಂದು ಶುದ್ಧವಾದಳು. ಅಂದಿನ ದಿನ ಎಲ್ಲರೂ ಜೊತೆಯಾಗಿ ಉಂಡರು. ಅಕ್ಕ ತಂಗಿ ಜೊತೆಯಾಗಿ ಸಂತೋಷದಿಂದ ಇದ್ದರು.

ಸ್ವಲ್ಪ ದಿನ ಕಳೆಯಿತು. ಅಕ್ಕೆರಸು ಸಿರಿ ಬಸುರಿಯಾದಳು. ತಿಂಗಳು ತುಂಬುತ್ತಾ ಬಂದಿತು. ಕೊಡ್ಸರಾಳ್ವನಿಗೆ ಉಲ್ಲಾಸದ ಸಂಭ್ರಮ. ಅಕ್ಕ ಸಾಮು ತಂಗಿ ಸಿರಿಯನ್ನು ಪ್ರೀತಿಯಿಂದ ಕಾಣುತ್ತಿದ್ದಳು. ಸಿರಿಗೆ ಒಂಬತ್ತು ತಿಂಗಳು ತುಂಬುತ್ತಾ ಬಂದಿತು. ಸಾಮುವಿನ ತವರಿನ ಉಜೆಮಾರು ಗುತ್ತಿನವರು ಬಸುರಿಯನ್ನು ಸಮ್ಮಾನದೂಟಕ್ಕೆ ಕರೆಯಲು ಬಂದರು. ಮರುದಿನ ಬೆಳಗ್ಗೆ ಅಕ್ಕ ತಂಗಿ ಸಿಂಗರಿಸಿಕೊಂಡು ಉಜೆಮಾರು ಗುತ್ತಿಗೆ ತೆರಳಿದರು. ಕಿಲ್ಲೆಯವರು ದೊಡ್ಡ ಬಿರ್ದಿನ ಊಟ ಬಳಸಿದರು. ಅದೇ ದಿನ ಸಂಜೆಯೇ ಕೊಟ್ಯಾಡಿಗೆ ಬರಲು ಹೊರಟರು. ಸಿರಿಗೆ ಅಂದಿಗೆ ಒಂಬತ್ತು ತಿಂಗಳು ಒಂಬತ್ತು ದಿನ. ದಾರಿಯ ಕಿರುತೋಡಿನ ಬಳಿಯ ಹೊನ್ನೆಯ ಮರದಡಿ ಬರುವಾಗ ಸಿರಿಗೆ ಹೊಟ್ಟೆಯಲ್ಲಿ ನೋವು ಕಾಣಿಸಿತು. ಸಿರಿ ಹೊನ್ನೆ ಮರದಡಿ ಮೂಡುದಿಕ್ಕಿಗೆ ಹೋದ ಗೆಲ್ಲಿಗೆ ಕೈಕೊಟ್ಟು ನೆಗಹಿದ್ದ ಕಲ್ಲಿನ ಮೇಲೆ ನಿಂತಳು. ಲಂಕೆ ಲೋಕನಾಥ ಬೆರ್ಮರನ್ನು ಧ್ಯಾನಿಸುತ್ತಾ ನಾರಾಯಣ ಪದ ಹಾಡಿದಳು. ಮುಕ್ಕಾಲು ಮೂರು ಗಳಿಗೆಯೊಳಗೆ ಅಕ್ಕೆರಸು ಸಿರಿ ಹೆಣ್ಣು ಮಗುವಿಗೆ ಜನ್ಮವಿತ್ತಳು. ಮಗುವನ್ನು

ಮಲಗಿಸಲು ಎಳೆಯ ಕಂಗಿನ ಮರದ ಹಾಳೆ ತರಲು ಸಾಮು ಸಾನಬೊಟ್ಟಿಗೆ ತೆರಳಿದಳು. ಅಡಿಕೆಯ ಎಳೆ ಹಾಳೆ ತಂದಳು. ಅಷ್ಟರಲ್ಲಿ ಸಿರಿ ಮಾಯಾದ ಹಾಳೆಯನ್ನು ತಾನೆ ಸೃಷ್ಟಿಸಿದಳು.

ಮಗುವನ್ನು ಅದರಲ್ಲಿ ಮಲಗಿಸಿದಳು. ಮುದ್ದಾದ ಮಗು. ಎತ್ತಿ ಆಡಿಸಿದಳು. ಜೋಗುಳ ಹಾಡಿದಳು. ಮಗುವಿಗೆ ಪ್ರೀತಿಯಿಂದ ಮುತ್ತಿಟ್ಟಳು. ಸೊನ್ನೆ ಎಂದು ಹೆಸರಿಟ್ಟು ಕರೆದಳು. ಸಿರಿ ಮಗುವನ್ನು ಸಾಮುವಿನ ಕೈಗೆ ನೀಡಿದಳು. "ಅಕ್ಕ, ನಾನ್ನಿನ್ನು ಕೊಟ್ರಾಡಿಗೆ ಬರಲಾರೆ. ನನ್ನ ಬದುಕು ಕೊನೆಯಾಗುವ ಹೊತ್ತು ಸಮೀಪಿಸಿತು. ನನ್ನ ಮುದ್ದು ಮಗ ಕುಮಾರನಿಗೆ ಮಾತುಕೊಟ್ಟಂತೆ ಮಾಯವಾಗುತ್ತೇನೆ. ಅವನ ಸೇರಿಗೆಗೆ ಸೇರಿಕೊಳ್ಳುತ್ತೇನೆ. ಮಗು ಸೊನ್ನೆಯನ್ನು ನಿನ್ನ ಹಾಗೂ ನನ್ನ ಗಂಡನ ಕೈಗೆ ಹಾಕಿದ್ದೇನೆ. ಕಾನಬೊಟ್ಟು ಅಜ್ಜ ಚಂದಯ್ಯ ಹೆಗ್ಗಡೆಯವರ ಕೈಗೆ ಮಗುವನ್ನು ನೀಡಿರಿ. ಅವರು ಈ ಮಗುವನ್ನು ಪ್ರೀತಿಯಿಂದ ಸಾಕುತ್ತಾರೆ. ಇದು ನನ್ನ ಕೊನೆಯ ಆಸೆ. ಇಷ್ಟಾಗುವಾಗ ನನ್ನ ಜೀವಕ್ಕೆ ಕೊನೆ ಬಂದೀತು. ನಾವಿಬ್ಬರೂ ಮುಂದೆ ಮಾಯದಲ್ಲಿ ಒಂದಾಗೋಣ" ಎಂದು ಹೇಳಿ ಸಿರಿ ಮಾಯವಾದಳು.

❖❖❖❖

ಜೋಕ್ಲೆ ಗಾದ್ ತುಳು ಕತೆಕ್ಕುಲು

1.	ಕೋಟಿ- ಚೆನ್ನಯ	:	ಡಾ. ವಾಮನ ನಂದಾವರ
2.	ಅಕ್ಕೆರಸು ಸಿರಿ	:	ಎ. ವಿ. ನಾವಡ
3.	ಕೋಡ್ದಬ್ಬು	:	ಡಾ. ಸುಶೀಲಾ ಉಪಾಧ್ಯಾಯ
4.	ಪರತಿ ಮಂಗನೆ	:	ಕೆ. ಲೀಲಾವತಿ
5.	ಪುಳ್ಯೂರ ಬಾಚೆ	:	ವೆಂಕಟರಾಜ ಪುಣಿಂಚತ್ತಾಯ
6.	ಅಬ್ಬಗೆ ದಾರಗೆ	:	ಕೆ.ಜೆ. ಶೆಟ್ಟಿ ಕಂಡಂದಲೆ
7.	ಮೂಂಕು ಸಂಬಳೊ	:	ಡಾ. ಕೆ. ಚಿನ್ನಪ್ಪ ಗೌಡ
8.	ಮಗೆ ಬರವು ಕಲ್ತೆ	:	ಕನರಾಡಿ ವಾದಿರಾಜ ಭಟ್
9.	ಮಾಯಾಂದಾಳ್	:	ಯಶವಂತಿ ಸುವರ್ಣ
10.	ಕಲ್ಲುರ್ಟಿ ಕಲ್ಕುಡೆ	:	ಅಮೃತ ಸೋಮೇಶ್ವರ
11.	ಬನ್ನಾಲ್	:	ಕ್ಯಾಥರಿನ್ ರಾಡ್ರಿಗಸ್
12.	ಮಾಮಿ ಮರ್ಮಲ್	:	ಡಾ. ಗಣನಾಥ ಶೆಟ್ಟಿ ಎಕ್ಕಾರು
13.	ಜೋಗಿ ಪುರುಸೆರ್	:	ಕುದ್ಕಾಡಿ ವಿಶ್ವನಾಥ ರೈ
14.	ಅಗೋಳಿ ಮಂಜನೆ	:	ಗಣೇಶ ಅಮೀನ್ ಸಂಕಮಾರ್
15.	ಕಣ್ಣ್ಡೊ ತೂವಂದಿನ ಕೆಬಿಟ್ ಕೇನಂದಿನ	:	ಕೆ. ಆರ್. ರೈ
16.	ನಾಗಸಿರಿ	:	ಅನಂತರಾಮ ಬಂಗಾಡಿ
17.	ಮಾಯೊದ ಪೊಣ್ಣು	:	ಡಿ. ಯದುಪತಿ ಗೌಡ
18.	ಮುಡಿಪ್ಪೆರಾವಂದಿ ಮಲ್ಲಿಗೆ	:	ಎನ್. ಕೊಯಿರಾ ಬಾಳೆಪುಣಿ
19.	ಅಪ್ಪೊದಡ್ಯೆ	:	ಮುದ್ದು ಮೂಡುಬೆಳ್ಳೆ
20.	ಭೂತಾಳ ಪಾಂಡ್ಯೆ	:	ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್